ಓಂ ಶ್ರೀ ಗುರುಬಸವ ಲಿಂಗಾಯ ನಮಃ

866666

ಕಲ್ಯಾಣ ಕಿರಣ

ಬೆಲೆ-20/-

ಮಾರ್ಚ್-2012



ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು



ಧಾರವಾಡ ರಾಷ್ಟ್ರೀಯ ಬಸವ ದಳದವರಿಂದ ದಿ 19-2-2012 ರಂದು ಶಿವರಾತ್ರಿ ಗಣಮೇಳದ ನಿಮಿತ್ತ ಪಥ ಸಂಚಲನ

ಬಸವ ಭಾವಚಿತ್ರದೊಡನೆ ಮೆರವಣಿಗೆ



ಸಂಪುಟ-42 | ಬಸವ ಶಕೆ -878 | ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-01 | ಮಾರ್ಚ್- 2012 | ವಾರ್ಷಿಕ ಚಂದಾ 200 ರೂ.

ಮೇರು ಶಕ್ತಿಯ ದಿಬ್ಬಣ

ಉರ್ವಿಯೊಳಗೆ ಸಾರಿ ಓರ್ವರು
ಮೇರು ಶಕ್ತಿ ಹೇರಿ ತಂದರು
ಅಬ್ಬರದ ಭಾರವನಿವರೊಬ್ಬರೇ ಹೊತ್ತಿಹರು
ದಿಬ್ಬಣವ ನೋಡಿರೇ ನೀವು ದಿಬ್ಬಣವ ನೋಡಿರೇ
    ನೇರ ಬಸವಾಕ್ಷರವ ಸಾರಿ ಹೇಳಿದರಿವರು
    ಮೂಲ ತತ್ವಕೆ ರೂಪ ತಂದವರಿವರು
    ಇವರೇರಿ ಹೋಗುತಿಹ ಮಾರ್ಗ ಮಧ್ಯದಿ ನೆರೆದ
    ದಿಬ್ಬಣವ ನೋಡಿರೇ ನೀವು ದಿಬ್ಬಣವ ನೋಡಿರೇ
ಉಬ್ಬಿ ಹೋಯಿತು ಜಗವು, ತತ್ವದಾ ಸುಗ್ಗಿಯಲಿ
ಮಿಂದು ಮೆದ್ದರು ಎಲ್ಲ ಇವರ ಅನುಭವದ ಜ್ಞಾನದಲಿ
ದಿನವೆಲ್ಲ ಶಿವರಾತ್ರಿ, ಜಗವೆಲ್ಲ ಬಸವಮಯ
ಸಾಗಿ ಬಂದ ಶರಣರ ದಿಬ್ಬಣವ ನೋಡಿರೇ ನೀವು ದಿಬ್ಬಣವ ನೋಡಿರೇ
    ರಜತ ಸಂಭ್ರಮದ ರಾಶಿ ಕೂಟದಲಿ
    ಗಣಲಿಂಗ ಘನಲಿಂಗ ರೂಪದಲಿ ಬಯಲಾಗಿ
    ಬಯಲ ಸುದ್ದಿಯ ಸಾರಿ ಹೇಳಿದ ಶರಣ ಮೇಳದ
    ಘನವ ಸಾರಿ ಬರುತಿಹ, ದಿಬ್ಬಣವ ನೋಡಿರೇ ನೀವು ದಿಬ್ಬಣವ ನೋಡಿರೇ
ಕೋಟಿ ಮನದ ಕೂಟವಿದು ಸಾಟಿಯಿಲ್ಲವೊ ಇದಕೇ
ಶರಣ ದಂಡಿನ ಮೇಳ, ಅನುಭವದಡಿಗೆಯ ಸಾರ
ಶಿಸ್ತು ಸಾಮ್ಯದ ಜೊತೆಗೆ ಮುಕ್ತಿ ಪದವಿಗೆ ಸಂದ
ದಿಬ್ಬಣವ ನೋಡಿರೇ ನೀವು ದಿಬ್ಬಣವ ನೋಡಿರೇ
    ಕರೆದಿಹರು ಮಾತಾಜಿ ನೆರೆದಿಹ ಸಮೂಹವನು
    ಬೆರೆಸಿಹರು ಲಿಂಗದಲಿ ಗುರುಬಸವ ಕ್ಷೇತ್ರದಲಿ
    ಜಯ ಘೋಷ-ಘೋಷಣೆಯ ವಿಜಯದ ಹಾದಿಯಲಿ
    ನಡೆದು ಬಂದಿಹ ಪೂಜ್ಯ ಮಾತಾಜಿಯ
    ದಿಬ್ಬಣವ ನೋಡಿರೇ ನೀವು ದಿಬ್ಬಣವ ನೋಡಿರೇ
ಮಣಿಹ ಪೂರೈಸ ಬಂದ ದೈವೀ ಸಂಕಲ್ಪಕೆ ಸಂದ
ಮರ್ತ್ಯಕ್ಕೆ ಮಂಗಳ ಬೆಳಕನು ತಂದ
ಮಹಾ ಮಂಗಳ ಮೂರ್ತಿ ಮಾತಾಜಿಗೆ ಶರಣು ಶರಣೆನ್ನಲು ಬಂದ
ದಿಬ್ಬಣವ ನೋಡಿರೇ ನೀವು ದಿಬ್ಬಣವ ನೋಡಿರೇ.

– ಕೆ. ವೀರೇಶ್, ಬಸವ ಗಂಗೋತ್ರಿ

ಕಿರಣಗನ್ನಡಿ

ಮಾರ್ಚ್ -ಏಪ್ರಿಲ್ -ಮೇ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆ -ಉತ್ಸವಗಳು

1.	ಚಾಂದ್ರಮಾನ ಯುಗಾದಿ, ಅಲ್ಲಮಪ್ರಭು ಜಯಂತಿ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳ	ಮಾರ್ಚ್ - 23,24,25
2.	879ನೆಯ ಬಸವ ಜಯಂತಿ	ಏಪ್ರಿಲ್- 24
3.	ಧಾರವಾಡದಲ್ಲಿ ಶರಣೋತ್ಸವ	ಏಪ್ರಿಲ್-28-30
4.	ಬಸವ ಗಂಗೋತ್ರಿಯಲ್ಲಿ ಬಸವೋತ್ಸವ	ಮೇ 27

ಮುಖ ಪುಟ - ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು

ಹೊದ್ದಿಕೆಯ 4ನೇ ಪುಟ - ಬನಹಟ್ಟಿಯಲ್ಲಿನ ಮೆರವಣಿಗೆಯ ಚಿತ್ರ

2ನೇ ಪುಟ - ಧಾರವಾಡ ರಾ.ಬ.ದಳದ ಶರಣ ಶರಣೆಯರಿಂದ ಶಿವರಾತ್ರಿಯ ಪಥಸಂಚಲನ

3ನೆಯ ಪುಟ -ಜಾಹಿರಾತು

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 080-23131476, 22923736

ಶ್ರೀ ಮಾತೆಗೆ ನುಡಿ ನಮನ

ಗಣ ದಾಸೋಹಿ ಮಾತಾಜಿ ವಚನ ಸಂಗ್ರಹಿ ಮಾತಾಜಿ
ಲಿಂಗಾಚಾರಿ ಮಾತಾಜಿ ಸದಾಚಾರಿ ಮಾತಾಜಿ

ಶಿವಾಚಾರಿ ಗುರು ಮಾತಾಜಿ ಗಣಾಚಾರಿ ಗುರು ಮಾತಾಜಿ
ಭೃತ್ಯಾಚಾರಿ ಮಾತಾಜಿ ಸಮಾಜ ವಿಜ್ಞಾನಿ ಮಾತಾಜಿ

ವ್ಯಷ್ಟಿ ಕಲ್ಯಾಣಿ ಮಾತಾಜಿ ಸಮಷ್ಟಿ ಕಲ್ಯಾಣಿ ಮಾತಾಜಿ
ರಾಷ್ಟ್ರ ಕಲ್ಯಾಣಿ ಮಾತಾಜಿ ವಿಶ್ವಕಲ್ಯಾಣಿ ಮಾತಾಜಿ

ಧರ್ಮಬೋಧಕರೆ ಮಾತಾಜಿ ಧರ್ಮಪಾಲಕರೆ ಮಾತಾಜಿ
ಅಮೂಲ್ಯ ಚಿಂತಕಿ ಮಾತಾಜಿ ಅಹಿಂಸಾವಾದಿ ಮಾತಾಜಿ

ವಚನ ಶುದ್ಧೀಕರಣಿ ಮಾತಾಜಿ ವಚನ ವಿಮರ್ಶಕಿ ಮಾತಾಜಿ
ವಚನ ವಿಶ್ಲೇಷಕಿ ಮಾತಾಜಿ ವಚನಾಂಬರಿ ಗುರು ಮಾತಾಜಿ

ಶರಣಗಣಮಣಿ ಮಾತಾಜಿ ಶರಣಜನರಕ್ಷಕಿ ಮಾತಾಜಿ
ಲಿಂಗದೇವನಿಷ್ಠ ಮಾತಾಜಿ ಜಂಗಮವಂದಿತೆ ಮಾತಾಜಿ

ಅಷ್ಟಾವರಣೆ ಮಾತಾಜಿ ಷಡಾಚಾರಿ ಶ್ರೀ ಮಾತಾಜಿ
ಷಡಸ್ಥಲಾರೋಹಿ ಮಾತಾಜಿ ಷಡಂಗ ದಾಸೋಹಿ ಮಾತಾಜಿ

ಕ್ರಾಂತಿಕಾರಿಣಿಯೆ ಮಾತಾಜಿ ಶಾಂತಾವತರಣಿಯೆ ಮಾತಾಜಿ
ಸಕಲಜೀವಹಿತೆ ಮಾತಾಜಿ ಸರ್ವೇಶಾಸುತೆ ಮಾತಾಜಿ

ವಿಶ್ವಕುಟುಂಬಿ ಮಾತಾಜಿ ಲಿಂಗದೇವಪ್ರಿಯೆ ಮಾತಾಜಿ
ಗುರುಬಸವಸುತೆ ಮಾತಾಜಿ ಮಹಾಜಗದ್ಗುರುವೆ ಮಾತಾಜಿ

ಲಿಂಗಾನಂದಸುತೆ ಮಾತಾಜಿ ಗಂಗಾಮಾತಾಜಿಯ ಮಾತಾಜಿ
ಶರಣರಾಪ್ರಿಯೆ ಮಾತಾಜಿ ಸಿದ್ಧರಾಮನ ಗುರು ಮಾತಾಜಿ

ಪಾಹಿಮಾಂ ಪಾಹಿಮಾಂ ಮಾತಾಜಿ
ರಕ್ಷಮಾಂ ರಕ್ಷಮಾಂ ಮಾತಾಜಿ

ರಕ್ಷಮಾಂ ರಕ್ಷಮಾಂ ಮಾತಾಜಿ
ರಕ್ಷಮಾಂ ರಕ್ಷಮಾಂ ಮಾತಾಜಿ

– ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿ

ನೆನಪಿನ ಬುತ್ತಿ ಬಿಚ್ಚಿದಾಗ – 7

ನಾನು ಮನೆಯಲ್ಲಿದ್ದಾಗ ಒಂದು ವಿಶೇಷ ಪ್ರಸಂಗ ಜರುಗಿತು. ಅದನ್ನು ಬರೆಯಲು ಮರೆತುದು ನೆನಪಿಗೆ ಬಂದಿತು. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ಪ್ರಥಮ ಭೇಟಿಯಾಗಿ ಮೊದಲನೇ ಭಾಷಣ ಕೇಳಿ ಪ್ರಭಾವಿತಳಾಗಿದ್ದುದು ಸರಿಯಷ್ಟೇ. ಅಂದಿನಿಂದ ಪೂಜ್ಯರ ಪುಸ್ತಕಗಳನ್ನು ಓದುತ್ತಾ ತಾಯಿ ಗಂಗಮ್ಮನವರ ಜೊತೆ ಅಧ್ಯಾತ್ಮ ವಿಚಾರಗಳ ಬಗ್ಗೆ ಚರ್ಚಿಸುತ್ತಿದ್ದುದಲ್ಲದೇ ನಾನು ಸನ್ಯಾಸಿಯಾಗುವ ಬಗ್ಗೆ ಆಗಾಗ ಪ್ರಸ್ತಾಪಿಸುತ್ತಿದ್ದೆ. ಆಗ ಅವರಿಗೆ ಸುತಾರಾಂ ಇಷ್ಟವಿರಲಿಲ್ಲ. ಅವರು ಬಹುದೇವತಾ ಉಪಾಸಕರಾದಂತೆ, ಬಹು ಗುರು ಉಪಾಸಕರು ಸಹ ಆಗಿದ್ದರು. ಪೂಜಾ ಕೋಣೆಯ ತುಂಬಾ ಹಲವಾರು ದೇವತೆಗಳ ಭಾವಚಿತ್ರಗಳು ತೂಗುತ್ತಿದ್ದವು. ಅವೆಲ್ಲಾ ಪೂಜೆ ಮಾಡಲು ಎಷ್ಟೋ ಸಮಯ ಹಿಡಿಯುತ್ತಿತ್ತು. ನಾನು ಆಸ್ತಿಕಳಿದ್ದು, ಬಸವತತ್ತ್ವ ತಿಳಿಯದ್ದರಿಂದ-ಗೊತ್ತಿರದೆ ಇರುವುದರಿಂದ ಎಲ್ಲವನ್ನೂ ನಿಷ್ಠೆಯಿಂದ ಪೂಜಿಸುತ್ತಿದ್ದೆ. ನನ್ನ ತಮ್ಮ ಪ್ರಕಾಶ ಹಾಗಲ್ಲ, ಕಾಟಾಚಾರಕ್ಕೆ ಪೂಜಿಸಿ ಓಡುತ್ತಿದ್ದ. ಗಂಗಮ್ಮನವರು ಆರಾಧಿಸುತ್ತಿದ್ದ ಹಲವಾರು ಜನರಲ್ಲಿ ಪುಟ್ಟಪರ್ತಿ ಸಾಯಿಬಾಬಾ ಸಹ ಒಬ್ಬರು. ಅವರು ಅವತಾರ ಪುರುಷರೆಂಬ ಶ್ರದ್ಧೆ. ಒಂದು ದಿವಸ ಹೇಳಿದರು "ಬಾಬಾ ಅವರು ತ್ರಿಕಾಲ ಜ್ಞಾನಿಗಳು, ಅವರನ್ನು ಕೇಳೋಣ ನೀನು ಸನ್ಯಾಸಿ ಆಗಬೇಕೋ ಬೇಡವೋ ಎಂಬ ಬಗ್ಗೆ" ಎಂದು. ನನಗೆ ನಗು ಬಂತು. "ನನ್ನ ಭವಿಷ್ಯ ನನ್ನ ಕೈಯಲ್ಲಿದೆ. ನನ್ನ ಜೀವನದ ಬಗ್ಗೆ ಅಭಿಪ್ರಾಯ ಅವರೇಕೆ ಕೊಡಬೇಕು "ಎಂದೆ. "ಇರಲಿ, ಹೋಗಿ ಒಂದು ಮಾತು ಕೇಳೋಣ" ಎಂದರು. ನಾನು ಮತ್ತು ಅಮ್ಮ ಪುಟ್ಟಪರ್ತಿಗೆ ಹೋದೆವು.

ನನಗೆ ಕೆಲವು ಸಂದೇಹಗಳಿದ್ದವು. ಬರಿಗೈಯಿಂದ ಬೂದಿ, ಪುಟ್ಟ ವಿಗ್ರಹ, ಉಂಗುರ ಮುಂತಾದ ಸಣ್ಣ ವಸ್ತು ತೆಗೆಯುವ ಬಗ್ಗೆ 'ಪವಾಡ' ಎನಿಸದೇ 'ಕೈವಾಡ' ಎಂದು ನನ್ನ ಅನಿಸಿಕೆ. ಬಾಬಾ ಅವರು ಭಕ್ತರು ಆಡುವ ಭಾಷೆಯಲ್ಲಿ ಮಾತನಾಡುತ್ತಾರೆ. ನಾವು ಏತಕ್ಕೆ ಹೋಗಿದ್ದೇವೆ ಎಂಬ ಬಗ್ಗೆ ಅವರೇ ಹೇಳಿಬಿಡುವ ದಿವ್ಯಜ್ಞಾನಿಗಳು ಎಂಬ ವದಂತಿ ಇತ್ತು. ಅಲ್ಲಿಗೆ ಹೋದ ಭಕ್ತರು ಬಾಬಾ ಅವರಿಂದ ಸನ್ನೆಯ ಕರೆ ಬರುವವರೆಗೆ ಕಾಯುತ್ತಲಿದ್ದರು. ಬಿಟ್ಟು ಹೋಗಲು ಭಯ. ಇದರಿಂದ ಹೋಟೆಲ್‌ಗಳವರಿಗೆ ಪುಷ್ಕಳ ವ್ಯಾಪಾರ. ಐದು ರೂಪಾಯಿಗೆ ಒಂದು ಊಟ ಜಾರಿಗೆ ತಂದರಂತೆ, ನಾನು ತಾಯಿಯವರಿಗೆ ಹೇಳಿದೆ, "ನೀವು ಯಾರ ಮುಂದು ನಾವೇತಕ್ಕೆ ಬಂದಿದ್ದೇವೆ ಎಂಬ ಬಗ್ಗೆ ಬಡಬಡಿಸಕೂಡದು. ನನಗೆ ಎರಡು ಸಂದೇಹಗಳಿವೆ. ಜನರು ಕಾಯುತ್ತಾ ಕುಳಿತಾಗ ಅಕ್ಕ-ಪಕ್ಕದವರ ಹತ್ತಿರ ಹೇಳಿಕೊಳ್ಳುವ ಮಾತುಗಳನ್ನು ಕೇಳಿಸಿಕೊಂಡು ಬಾಬಾ ಅವರಿಗೆ ಮುಟ್ಟಿಸುವ ಗೂಢಚಾರ ಸ್ವಯಂಸೇವಕರಿದ್ದಾರೆ ಎಂಬುದು ಒಂದು, ಬಾಬಾ ನಿಜವಾದ ಅಧ್ಯಾತ್ಮ ಜೀವಿ ಗುರುವಾಗಿದ್ದರೇ, ನರೇಂದ್ರನಾಥನನ್ನು ಥಕ್ಕನೇ ಗುರುತಿಸಿದ ರಾಮಕೃಷ್ಣ ಪರಮಹಂಸರಂತೆ ನನ್ನನ್ನು ಗುರುತಿಸಬೇಕೆಂಬುದು ಮತ್ತೊಂದು. ಉಳಿದ ಸಹಸ್ರಾರು ಭಕ್ತರು ಇಲ್ಲಿ ಬಂದಿರುವುದು ಹೆಣ್ಣು, ಹೊನ್ನು, ಮಣ್ಣುಗಳ ಗಳಿಕೆಗಾಗಿ. ನಾನು ಬಂದಿರುವುದು ದೇವರು, ಧರ್ಮ ಮತ್ತು ಅಧ್ಯಾತ್ಮದ ಹಂಬಲದಿಂದ ಆದ್ದರಿಂದ ನನ್ನ ಅಂತರಂಗವನ್ನು ಅವರು ನಿಜವಾದ ಗುರುವಾಗಿದ್ದರೇ ಬೇಗನೇ ಅರಿಯಬೇಕು." ಒಂದು ದಿನ ಆಯಿತು, ಎರಡು ದಿನವಾಯಿತು, ಒಂದು ವಾರವಾಯಿತು, ತಂದ ದುಡ್ಡೆಲ್ಲಾ ಕರಗಿ ಬಸ್ ಚಾರ್ಜಗಷ್ಟೇ ಉಳಿಯಿತು. ಬಾಬಾರ ದರ್ಶನ ಸಿಗಲಿಲ್ಲ. ಅವರು ಎತ್ತರದ ಮೇಲೆ ನಿಂತು, ದರ್ಶನಕೊಟ್ಟು, ನಂತರ ಜನರ ಮಧ್ಯೆ ಬಂದು ಓಡಾಡಿ, ಬೆರಳಿಂದ ಸನ್ನೆ ಮಾಡುತ್ತಿದ್ದರು. ಹಾಗೆ ಸೂಚನೆ ಪಡೆದವರಷ್ಟೇ ಎದ್ದು ಹೋಗಿ ಖಾಸಗಿ ದರ್ಶನ ಪಡೆಯುತ್ತಿದ್ದರು. ನಮಗೆ ಖಾಸಗಿ ದರ್ಶನ ಸಿಗಲಿಲ್ಲ. ದೇವರು ದೊಡ್ಡವನು, ಒಂದು ವೇಳೆ ಹಾಗೇನಾದರು ಭೇಟಿಯಾಗಿದ್ದರೆ ನಾನು ಅವರ ಪ್ರಭಾವಕ್ಕೆ ಒಳಗಾಗಿ ಬಿಡಬಹುದಿತ್ತೇನೋ..! ನಂತರ ಓರ್ವ ಪ್ರೌಢ ಮನಶಾಸ್ತ್ರಜ್ಞರು ಹೇಳಿದರು, "ಅವರ ಗೆಳತಿಯೋರ್ವಳು ಮನಶಾಸ್ತ್ರ ಓದಿದ್ದವಳು, ಬಾಬಾ ಅವರ ಪ್ರಭಾವಕ್ಕೆ ಒಳಗಾಗಿ ವ್ಯಕ್ತಿತ್ವವನ್ನೇ ಕಳೆದುಕೊಂಡು, ಗೊಂಬೆಯಂತಾಗಿ ಯಾವಾಗಲು 'ಬಾಬಾ' ಎಂದು ಬಡಬಡಿಸುತ್ತಾಳೆ."ಎಂದು.

ನಂತರ 1972ರಿಂದ 1975ರವರೆಗೆ ಆಗ ಇದ್ದ ಬೆಂಗಳೂರಿನ ಎಲ್ಲಾ ಬಡಾವಣೆಗಳಲ್ಲಿ ಪೂಜ್ಯ ಗುರುಗಳು ಮತ್ತು ನಾನು ಪ್ರವಚನ ಮಾಡಿದೆವು. ಒಬ್ಬರ ಪರಿಚಯವಾಯಿತು. ಅವರು ಬಾಬಾ ಅವರ ಸಂಸ್ಥೆಯಲ್ಲಿ ಬಹಳ ಸೇವೆ ಸಲ್ಲಿಸಿದವರು. "ಇವರು ಈಗ ಪೂಜ್ಯರ ಪ್ರವಚನಕ್ಕೆ ಬಹಳ ಹೋಗುತ್ತಾರೆ." ಎಂದು ಮಿತ್ರರು ಪರಿಚಯಿಸಿದಾಗ, "ಅಮ್ಮಾವರಿಗೆ ಒಮ್ಮೆ ಬಂದು ಕಾಣಲು ಹೇಳಿರಿ." ಎಂದು ಬಾಬಾ ಹೇಳಿ ಕಳಿಸಿದ್ದರು. ಅವರ ಸಂಸ್ಥೆಗಳು ಮಾಡುತ್ತಿದ್ದ ಸಮಾಜ ಸೇವೆ ಬಗ್ಗೆ ನಮಗೆ ಮೆಚ್ಚುಗೆ ಇದ್ದರೂ ಅವರು ಮಾಡುತ್ತಿದ್ದ ಪವಾಡಗಳ ಬಗ್ಗೆ ಅಸಮಾಧಾನವಿತ್ತು. ಕೆಲವರು ಅಂತಿದ್ದರು "ಪವಾಡ ಮಾಡಿ ಜನರನ್ನು, ಮುಖ್ಯವಾಗಿ

ಶ್ರೀಮಂತರನ್ನು ಆಕರ್ಷಿಸಿ ಅವರ ಹಣದಿಂದ ಶಿಕ್ಷಣ ಸಂಸ್ಥೆ, ಆಸ್ಪತ್ರೆ ನಡೆಸುತ್ತಾರಲ್ಲ ಉದ್ದೇಶ ಚೆನ್ನಾಗಿದೆ." ನಮ್ಮ ಸಿದ್ಧಾಂತವೆಂದರೆ ಉದ್ದೇಶ ಒಳ್ಳೆಯದಿದ್ದರೆ ಸಾಲದು, ಅದನ್ನು ಸಾಧಿಸುವ ಮಾರ್ಗ ಮತ್ತು ಸಾಧನವು ಚೆನ್ನಾಗಿರಬೇಕು. ಶೂನ್ಯದಿಂದ ಸೃಷ್ಟಿ ಸಾಧ್ಯ ಎಂಬ ಮೂಢನಂಬಿಕೆಯನ್ನು ಬೆಳಸಿ ಜನರನ್ನು ಆಕರ್ಷಿಸುವುದೇ ದೇವರ ದೃಷ್ಟಿಯಲ್ಲಿ ಮೊದಲನೇ ತಪ್ಪು, ಹೀಗಾಗಿ, ಪುಟ್ಟಪರ್ತಿ ಸಾಯಿಬಾಬಾ ಅವರು ಅನುಸರಿಸುತ್ತಿದ್ದ ಮಾರ್ಗದಲ್ಲಿ ನಮಗೆ ಎಳ್ಳಷ್ಟೂ ವಿಶ್ವಾಸವಿಲ್ಲದ್ದರಿಂದ, ಅದು ಅಪ್ರಾಮಾಣಿಕತೆ ಅನಿಸಿದ್ದರಿಂದ ನಾನು ಅವರ ದರ್ಶನಕ್ಕೆ ಹೋಗುವ ಮನಸ್ಸು ಮಾಡಲಿಲ್ಲ. ಜಾದೂಗಾರರು ಶೂನ್ಯದಿಂದ ಬಗೆಬಗೆಯ ವಸ್ತುಗಳನ್ನು ಹೊರತೆಗೆಯುವರು-ಅದು ಕೈಚಳಕ ಎಂದು ಪ್ರಾಮಾಣಿಕವಾಗಿ ಹೇಳುವರು.

ಮಲ್ಲೇಶ್ವರಮ್‌ದಲ್ಲಿ ಪ್ರವಚನ ಮಾಡುವಾಗ ಓರ್ವ ಜಾದೂಗಾರರ ಪರಿಚಯವಾಯಿತು. ಅವರ ಹೆಸರು ಸದ್ಯ ನೆನಪಿಗೆ ಬರುತ್ತಿಲ್ಲ. ಪೈಪಲೈನ್ ರಸ್ತೆಯಲ್ಲಿದ್ದರು. ಅವರು ಹೇಳಿದರು. "ಸಾಯಿಬಾಬಾ ಅವರಿಗೆ ಶೂನ್ಯದಿಂದ ವಸ್ತುಗಳನ್ನು ಉದಾಹರಣೆಗೆ ಬೂದಿ, ಗಣಪತಿ ಮೂರ್ತಿ, ಉಂಗುರ ಮತ್ತು ಕೈಗಡಿಯಾರ ಇತ್ಯಾದಿ ತೆಗೆಯಲು ನಾನೇ ಕಲಿಸಿದ್ದು. ನೀವೂ ಕಲಿಯಿರಿ, ಆಗ ನೋಡಿ ಹಣ ಹೇಗೆ ಬರುತ್ತದೆ. ನನಗೆ ಸ್ವಲ್ಪ ಹಣಕೊಟ್ಟರೇ ಸಾಕು." ಎಂದರು

"ನಮ್ಮ ದಾರಿ ಅದಲ್ಲ, ಏನಿದ್ದರೂ ನಮ್ಮದು ಜ್ಞಾನ ಮತ್ತು ಭಕ್ತಿಯ ಮಾರ್ಗ. ನಿಮಗೆ ಹಣ ಬೇಕಾದರೇ ಸಹಾಯ ಮಾಡುತ್ತೇವೆ." ಎಂದು ಹೇಳಿ ಪ್ರಾರ್ಥನಾ ಸಭೆಯಲ್ಲಿ ಹಣ ಸಂಗ್ರಹಿಸಿಕೊಟ್ಟೆವು. ಅವರು ಸಾಯಿಬಾಬಾಗೆ ಕಲಿಸಿದರೋ ಇಲ್ಲವೋ ಬಾಬಾ ಅವರು ಯಾರಿಂದಲಾದರೂ ಕಲಿತಿರಲೇಬೇಕಷ್ಟೇ. "ಶರಣರ ಜೀವನವನ್ನು ಮರಣದಲ್ಲಿ ನೋಡು." ಎಂಬ ಮಾತಿದೆ. ಪುಟ್ಟಪರ್ತಿ ಸಾಯಿಬಾಬಾ ಎಂಥಾ ದುಃಖಮಯ, ದಾರುಣ ಸಾವನ್ನು ಕಂಡರು. ಅದಕ್ಕೆ ಕಾರಣ ಅವರು ಕೂಡಿಹಾಕಿಕೊಂಡಿದ್ದ ಬಂಗಾರ, ವಜ್ರ ವೈಢೂರ್ಯ ಮತ್ತು ಹಣ. ಇಷ್ಟು ಅವರಿಗೆ ಏಕೆ ಬೇಕಿತ್ತು? ಮೂಢ ಜನರಿಂದ ಸಂಪತ್ತು ಬಂದಂತೆ ವಿವಿಧ ಕೆಲಸಗಳಲ್ಲಿ ತೊಡಗಿಸಿದ್ದರೆ ಈ ಕಚ್ಚಾಟಕ್ಕೆ ಅವಕಾಶ ಇರುತ್ತಿತ್ತೇ? ತ್ರಿಕಾಲ, ದಿವ್ಯಜ್ಞಾನಿ ಆದವರಿಗೆ ತಮ್ಮ ಅಂತ್ಯ ಹೀಗಾದೀತೆಂಬ ಅರಿವಿರಲಿಲ್ಲವೇ? ಕಡೆಯಲ್ಲಿ ಅವರು ನಿಸ್ಸಹಾಯಕರಾದಂತೆ, ಭಕ್ತರ ಕೈಗೊಂಬೆಯಾದಂತೆ ಚಿತ್ರಿಸಲಾಯಿತು. ಹಾಗಾದರೆ ಆ ಭಕ್ತರಿಗೆ ತಮ್ಮ ಗುರುವಿನ ಬಗ್ಗೆ ಭಯವಾಗಲಿ, ಭಕ್ತಿಯಾಗಲಿ ಉಳಿದಂತೆ ಕಾಣಲಿಲ್ಲವಲ್ಲವೇ? ಜೀವಿತದಲ್ಲಿ ಎಂಥಾ ಪ್ರಚಾರ ಪಡೆದ ವ್ಯಕ್ತಿ ಕಡೆಯಲ್ಲಿ ದಯನೀಯ ಸ್ಥಿತಿಗೆ ಬರಬೇಕಾದುದು ವಿಧಿಯ ವೈಚಿತ್ರ್ಯವಲ್ಲವೇ? ನನ್ನ ಜೀವನದ ಭವಿಷ್ಯ ಕುರಿತಾಗಿಯೂ ಅವರ ಅಭಿಪ್ರಾಯ ಪಡೆಯಲು ತಾಯಿ ಗಂಗಮ್ಮನವರು ಬಯಸಿದ್ದರು. ಅದು ಕೈಗೂಡಲಿಲ್ಲ.

ಮರೆತು ಹೋಗಿದ್ದ ಒಂದು ಪ್ರಸಂಗವನ್ನು ಚಿತ್ರಿಸಿದ್ದಾಯಿತು. ಈಗ ನಮ್ಮ ಮೂಲ ಕಥೆಗೆ ಬರೋಣ. ಋಷಿಕೇಶದಲ್ಲಿರುವಾಗ ಅಲ್ಲಿಂದ ಸುಮಾರು 7–8 ಕಿ.ಮೀ. ಮೇಲೆ ಫೂಲಚಟ್ಟಿ ಎಂಬ ಸ್ಥಳವಿದೆ. ಬೆಟ್ಟಗಳ ಮಧ್ಯ ಹರಿಯುತ್ತಾ ಬರುವ ಗಂಗಾ ನದಿಯನ್ನು ಇನ್ನೊಂದು ಚಿಕ್ಕ ಉಪನದಿ ಅಲ್ಲಿ ಕೂಡುವ ಸಂಗಮ ಸ್ಥಳ. ಅಲ್ಲಿ ಒಂದು ಆಶ್ರಮವಿತ್ತು. ಅಲ್ಲಿನ ಹೂವಿನ ಕಣಿವೆ ಮತ್ತು ಆಶ್ರಮವನ್ನು ನೋಡಲು ಪೂಜ್ಯ ಗುರುಗಳು, ಶ್ರದ್ಧಾ ಮಾತಾಜಿ, ನಾನು, ಶಿವಲಿಂಗಪ್ಪ ಎಂಬ ಕರ್ನಾಟಕದಿಂದ ಬಹು ಹಿಂದೆಯೇ ಬಂದಿದ್ದ ಓರ್ವ ಸಾಧಕ ನೋಡಲು ಹೋಗಿದ್ದೆವು. ಸಂಜೆ 5 ಗಂಟೆ. ಸಂಗಮ ಸ್ಥಾನದಲ್ಲಿ ಸ್ನಾನ ಮಾಡಿದೆವು. ಚಿಕ್ಕ ನದಿ ದಾಟಿ ಇಷ್ಟಲಿಂಗಾರ್ಚನೆಗೆ ಕುಳಿತೆವು. ಸೂರ್ಯಾಸ್ತವಾಗುತ್ತಿದ್ದಂತೆಯೇ ಉಳಿದವರೆಲ್ಲ ಆಶ್ರಮಕ್ಕೆ ಸಾಗಿದರು. ನನಗೆ ದಿವ್ಯಾನುಭವ ಆವರಿಸಿತು. ಹಿಂದೆ ಪರ್ವತರಾಜನ ಪುತ್ರಿ ಪಾರ್ವತಿ ಶಿವನನ್ನು ಒಲಿಸಲು ತಪಸ್ಸಿಗೆ ಕುಳಿತುದು ಇದೇ ಸ್ಥಳ. ಆಕೆಯ ತಪಸ್ಸಿಗೆ ಮೆಚ್ಚಿ ಶಿವನು ದರ್ಶನವಿತ್ತುದು ಇಲ್ಲಿಯೆ ಎಂಬುದು ಕಣ್ಣಿಗೆ ಕಟ್ಟಿತು. ಈ ದೃಶ್ಯಾವಳಿಗಳನ್ನು ನೋಡುತ್ತ, ಹಾಡುತ್ತ ನಾನು ಮೈಮರೆತು ಬಿಟ್ಟೆ. ನಾನು ಪೂಜೆ ಮುಗಿಸುವ ದಾರಿ ಕಾಯುತ್ತ ಪೂಜ್ಯ ಗುರುಗಳು, ಸಾಧಕ ಶಿವಲಿಂಗಪ್ಪ ಕುಳಿತು ಕಾಯುತ್ತಿದ್ದಾರೆ. ಪೂಜ್ಯರ ಮಾತುಗಳಲ್ಲೇ ಆ ಪ್ರಸಂಗವನ್ನು ಕೇಳಿ ನೋಡೋಣ.

"ಮಾತಾಜಿ ಶಿವಯೋಗ ಸಾಮ್ರಾಜ್ಯದಲ್ಲಿ ಲೀನವಾಗಿಬಿಟ್ಟರು. ಮೊದಲು ಸಚ್ಚಿದಾನಂದನ ಹಂಬಲದಲ್ಲಿ ಹಲುಬಿದರು. ಅನೇಕಾನೇಕ ಹೊಸ ಹೊಸ ವಚನಗಳನ್ನು ಹೃದಯ ತುಂಬಿ ಹಾಡಿದರು. ಕತ್ತಲೆಯಾದ್ದರಿಂದ ಅವುಗಳನ್ನೆಲ್ಲಾ ಬರೆದಿಡಲು ಸಾಧ್ಯವಾಗಲಿಲ್ಲ. ಬಾಹ್ಯ ಪ್ರಜ್ಞೆಯನ್ನು ಸಂಪೂರ್ಣ ಕಳೆದುಕೊಂಡರು. ಕಾಡಾರಣ್ಯದಲ್ಲಿ ಕಗ್ಗತ್ತಲೆ ಆವರಿಸಿತ್ತು. ನಕ್ಷತ್ರಗಳ ಮಬ್ಬು ಬೆಳಕಿನಲ್ಲಿ ನಾವು ಗಂಗಾ ನದಿಯ ತೀರದ ಮಳಲಿನಲ್ಲಿ ಮಂಡಿಸಿದ್ದೆವು. ರಾತ್ರಿ ಹೆಚ್ಚಾದಂತೆಲ್ಲಾ ಘೋರಾರಣ್ಯ ನಮಗೆ ಭಯಾನಕವಾಗಿ ತೋರಿತು. ಅವರನ್ನು ಪೂಜೆ ಮುಗಿಸುವಂತೆ ಅನೇಕ ಸಲ ಕೇಳಿಕೊಂಡರೂ ಅವರಿಗೆ ಕೇಳಿಸಲಿಲ್ಲ. ಪೂಜೆಗೆ ಕುಳಿತ

ಸ್ಥಳದಿಂದ ಆಶ್ರಮ ಸ್ವಲ್ಪ ದೂರದಲ್ಲಿತ್ತು. ಕಾಡುಮೃಗಗಳು ನೀರು ಕುಡಿಯಲು ಬರುವ ಸ್ಥಳದಲ್ಲಿ ನಾವು ರಾತ್ರಿ ಹತ್ತು ಗಂಟೆಯವರೆಗೆ ಕುಳಿತಿದ್ದೆವು. 10 ಗಂಟೆಗೆ ಮಾತಾಜಿಗೆ ಸಮಾಧಿಯಿಂದ ಉತ್ಥಾನವಾಯಿತು. ಮಾತಾಜಿಯ ಆಗಿನ ಸ್ಥಿತಿ ನೋಡಿ ನನಗೆ ಅಪಾರ ಆನಂದ-ಅಭಿಮಾನವುಂಟಾಯಿತು. ಇಂಥ ಶಿಷ್ಯಳನ್ನು ಪಡೆದ ನನ್ನ ಜೀವನ ಧನ್ಯವೆಂದು ಮನದಲ್ಲಿ ಭಾವಿಸಿದೆ, 'ನಿಮಿತ್ತಮಾತ್ರವಾಗಿ ಶಿಷ್ಯರಾಗಿ ಬಂದವರಿವರು. ನಿಜವಾದ ನನ್ನ ಒಂದು ವ್ಯಾಧಿ ಯಾವ ಔಷಧದಿಂದ ಹೋಗಿಲ್ಲ. ತಮ್ಮ ಪಾದೋದಕದಿಂದ ಹೋಗುವುದೆಂದು ನನಗೆ ಅನ್ನಿಸುತ್ತದೆ. ತಾವು ಸಂಕಲ್ಪ ಮಾಡಿ ಪಾದೋದಕ ಕೊಡಿ" ಎಂದು ವಿನಂತಿಸಿದೆ. ಮಗುವಿನ ಮಾತನ್ನು ಮನ್ನಿಸಿ ಧ್ಯಾನಮಗ್ನರಾಗಿ ಕುಳಿತಿದ್ದು ನಂತರ ಮಾತಾಜಿ ಪಾದೋದಕ ಪ್ರಸಾದವನ್ನಿತ್ತರು. ಅಂದಿನಿಂದ ನನ್ನ ಆ ಕಾಯಿಲೆ ಸಂಪೂರ್ಣವಾಗಿ ವಾಸಿಯಾಗಿದೆ". (ಚಿನ್ಮೂಲಾದ್ರಿ ಚಿತ್ಕಳೆಯಿಂದ)

ನನಗೆ ಆಗಾಗ ಭವಿಷ್ಯ ಸೂಚಕ ದಿವ್ಯ ಕನಸುಗಳು ಬೀಳುತ್ತಿದ್ದುದುಂಟು. ದಿವ್ಯಾನುಭವಗಳು ಒದಗಿ ಬರುತ್ತಿದ್ದವು. ನಾನಿನ್ನೂ ಮನೆಯಲ್ಲಿ ಇದ್ದು ಪೂಜ್ಯ ಗುರುಗಳಿಗೆ ಪತ್ರದ ಮುಖೇನ ವಚನಗಳನ್ನು ಬರೆದು ಕಳಿಸುತ್ತಿದ್ದೆ. ಮೈಸೂರಿನಲ್ಲಿ ಪ್ರವಚನ ನಡೆಸುತ್ತಿದ್ದರು. ಓರ್ವ ವ್ಯಕ್ತಿ ಗುರುಗಳ ಬಳಿ ಸೇವೆ ಮಾಡುವಂತೆ ಓಡಾಡುತ್ತಿದ್ದ. ನನಗೆ ಬಿದ್ದ ಕನಸಿನಲ್ಲಿ ಆ ಓರ್ವ ವ್ಯಕ್ತಿ ಪತ್ರಗಳನ್ನು ಒಡೆಯುವ ಕೆಲಸ ಮಾಡುತ್ತಿದ್ದ. ನಾನು ಗುರುಗಳಿಗೆ ಪತ್ರ ಬರೆದು ಆ ವ್ಯಕ್ತಿ ವಿಶ್ವಾಸದ್ರೋಹ ಮಾಡುತ್ತಿರುವುದಾಗಿ ತಿಳಿಸಿದೆ. ಪೂಜ್ಯರು ಪರೀಕ್ಷಿಸಿದಾಗ ಅದು ಸತ್ಯವಾಗಿತ್ತು. ನಂತರ ನಾನು ಮನೆಬಿಟ್ಟು ಮಠಕ್ಕೆ ಬಂದು ಮೈಸೂರಿನ ಪ್ರವಚನಕ್ಕೆ ಬಂದಾಗ ಜನರು ಸಾಲಾಗಿ ನಿಂತು ದರ್ಶನ ಪಡೆಯುತ್ತಿದ್ದರು. ಒಬ್ಬ ವ್ಯಕ್ತಿ ಹತ್ತಿರ ಬಂದು ನಮಸ್ಕರಿಸಿದಾಗ , "ನೀನು ನಾಗೇಶ್ ಅಲ್ಲವೆ?" ಎಂದು ಕೇಳಿದೆ. ಪೂಜ್ಯ ಗುರುಗಳಿಗೆ ಆಶ್ಚರ್ಯವಾಯಿತು. "ಇವರು ಪರಿಚಯವೆ? ಮೊದಲು ನೋಡಿದ್ದೀರಾ?" ಎಂದು ಕೇಳಿದರು. "ಅಹುದು, ಕನಸಿನಲ್ಲಿ ನೋಡಿದ್ದೆ" ಎಂದು ತಿಳಿಸಿದೆ. ನಂತರ ಮನೆಗೆ ಬಂದಾಗ ಹೇಳಿದೆ, "ಕನಸಿನಲ್ಲಿ ಕಂಡು ನೀವು ಎಚ್ಚರಿಕೆಯಿಂದಿರಲು ಸೂಚನೆ ಕಳಿಸಿದ್ದೆ." ಎಂದು. ಕನಸಿನ ಮೂಲಕ ಹೆಸರು ಸಹ ತಿಳಿದಿತ್ತು.

ದಾವಣಗೆರೆ ಮಠದಲ್ಲಿ ಇದ್ದಾಗ ಬೆಳಗಿನ ಜಾವ ಪೂಜೆಗೆ ಕುಳಿತಿದ್ದೆ. ಇಷ್ಟಲಿಂಗದಲ್ಲಿ ವಿಶೇಷ ದೃಶ್ಯ ಕಾಣಬಂದಿತು. ಅದರಲ್ಲಿ ನರಳುವ ಧ್ವನಿ ಕೇಳಿಬರುತ್ತಲಿದೆ. ಪೂಜ್ಯ ಅಪ್ಪಾಜಿಯವರದೇ ಆ ಧ್ವನಿ. ಕುತ್ತಿಗೆಯ ಹಿಂಭಾಗದಲ್ಲಿ ಎಕ್ಜೀಮಾ ಆಗಿ ವಿಪರೀತ ನವೆ ಕೊಡುತ್ತಿತ್ತು ಅದಕ್ಕೆ ಓರ್ವ ಹಳ್ಳಿ ವೈದ್ಯೆ ಔಷಧಿ ಕೊಡುವುದಾಗಿ ಹೇಳಿದರು. ನನಗೆ ಬೆಳಗಿನ ಜಾವದ ಪೂಜೆಯಲ್ಲಿ ಕಂಡ ದೃಶ್ಯ ನೆನಪಾಯಿತು. 'ಬೇಡ ಅಪ್ಪಾಜಿ' ಎಂದು ಹೇಳಿದೆ. ಕೇಳಲಿಲ್ಲ. ಆ ವೈದ್ಯೆಯನ್ನು ಕರೆತರಲು ಒಪ್ಪಿಗೆ ಕೊಟ್ಟರು. ಮರುದಿನ ಹಳ್ಳಿಯ ವೈದ್ಯೆ ಬಂದಳು. ಆಗಲೂ ಪರಿಪರಿಯಾಗಿ ಹೇಳಿದೆ. "ನೀವು ಅಂಜುಬುರುಕರು. ಹೆಣ್ಣು ಮಕ್ಕಳು ತಾನೆ? ಸನ್ಯಾಸಿಯಾದರೂ ಹೆಣ್ಣುಮಕ್ಕಳ ಪುಕ್ಕಲುತನ ಎಲ್ಲಿ ಹೋಗುತ್ತೆ" ಎಂದು ಅಪಹಾಸ್ಯ ಮಾಡಿದರು. ಸುಣ್ಣದಲ್ಲಿ ಕಲೆಸಿ ಆ ಮಹಿಳೆ ಏನೋ ಗಿಡಮೂಲಿಕೆ ಹಚ್ಚಿದಳು. ಏನು ಉರಿ, ತಾಪ, ಸಿಂಹಕ್ಕೆ ಕಾಯಿಲೆ ಬಂದಾಗ ಗರ್ಜನೆ ಮಾಡುವಂತೆ ಅಪ್ಪಾಜಿ ಕೂಗಿದರು. ಬಾಧೆ ಪಟ್ಟರು. ನಾಲ್ಕು ಫ್ಯಾನ್ ಹಾಕಿದರೂ ಆ ಉರಿ ಆರಲೊಲ್ಲದು. ಉರಿ ನಿಲ್ಲುವ ಹೊತ್ತಿಗೆ ಚರ್ಮದ ಏಳೂ ಪದರುಗಳು ಬೆಂದು ಹೋಗಿದ್ದವು. ಕೆಳಗಿನ ಮಾಂಸಖಂಡವೆಲ್ಲ ಬೆಂದು ಹೋಗಿತ್ತು. ಎಂಥಾ ಕ್ರೂರ ಚಿಕಿತ್ಸೆ ! ಹೊಸ ಸುಣ್ಣದಲ್ಲಿ ಕಲಸಿ ಗಿಡಮೂಲಿಕೆ ರಸವನ್ನು ಹಚ್ಚಲಾಗಿತ್ತು. ಪೂಜ್ಯರ ಸಂಕಟ ನೋಡಲಾರದೆ ನಮಗೆಲ್ಲ ದುಃಖವಾಗುತ್ತಿತ್ತು. ಚರ್ಮ ಬೆಂದು ಹೋಗಿ ಗಾಯವಾದ ದೃಶ್ಯವನ್ನು ನಾನು ಮೊದಲೇ ಇಷ್ಟಲಿಂಗದಲ್ಲಿ ಕಂಡೂ ಸಹ ತಪ್ಪಿಸಲಾರದೆ ಹೋದೆನಲ್ಲಾ ಎಂದು ನನಗೆ ಪರಿತಾಪವಾಗುತ್ತಿತ್ತು. "ಮಾತಾಜಿ, ನಿಮ್ಮ ಮಾತು ದೈವೀವಾಣಿ, ನಾನು ಕೇಳದೆ ತಪ್ಪು ಮಾಡಿದೆ. ಶಿಷ್ಯರು ಎಂದು ಉದಾಸೀನ ಮಾಡಿದೆ. ಇನ್ನೆಂದೂ ನಿಮ್ಮ ಮಾತು ಮೀರುವುದಿಲ್ಲ." ಎನ್ನುತ್ತಿದ್ದರು ಗುರುಗಳು. "ಇರಲಿ, ಆಗಿ ಹೋದುದಕ್ಕೆ ಚಿಂತಿಸಿ ಫಲವಿಲ್ಲ. ದೇವರು ಮುನ್ಸೂಚನೆ ಕೊಟ್ಟರೂ ನಾವು ಎಚ್ಚೆತ್ತುಕೊಳ್ಳಲಿಲ್ಲ." ಎಂದು ಸಮಾಧಾನ ಮಾಡಿದೆವು. ವೈದ್ಯರಿಗೆ ತೋರಿಸಿ ಚಿಕಿತ್ಸೆ ಮಾಡಿಸಲಾಯಿತು. "ಏನ್ರಿ ಸ್ವಾಮೀಜಿ, ಇಂಥಾ ಕಾಲದಲ್ಲೂ ಈ ಕ್ರೂರ ಚಿಕಿತ್ಸೆಗೆ ಮೊರೆ ಹೋದಿರಲ್ಲ." ಎಂದು ವೈದ್ಯರೂ ಆಕ್ಷೇಪಿಸಿದರು. ನಿಧಾನವಾಗಿ ಗಾಯ ಮಾಯ್ದರೂ ಚರ್ಮದ ಮೇಲಿನ ಸುಟ್ಟ ಕಲೆ ಕಡೆಯವರೆಗೂ ಹಾಗೇ ಇತ್ತು. ಎಕ್ಜೀಮಾ ಇನ್ನೂ ಉಳಿದಿತ್ತು. ಘೂಲಚೆಟ್ಟಿಯ ಸಂಗಮ ಸ್ನಾನದಲ್ಲಿ ಪೂಜಾನಂತರ ನೀಡಿದ ಕರುಣೋದಕದಿಂದ ತಮಗೆ ಪೂರ್ಣವಾಗಿ ಗುಣವಾಯಿತೆಂದು ಪೂಜ್ಯ ಗುರುಗಳು ಹೇಳುತ್ತಿದ್ದರು.

ನಾವು ತಂದಿದ್ದ ದುಡ್ಡು ಸ್ವಲ್ಪ, ಅದು ಖಾಲಿಯಾಗಿತ್ತು. ಮುಂದೇನು ಮಾಡಬೇಕು ಎಂಬ ಚಿಂತೆ ಕಾಡಲು ಶುರುವಾಯಿತು. ಆಶ್ರಮದಲ್ಲಿ ಊಟವೇನೋ ಉಚಿತವಾಗಿ ಸಿಗುತ್ತಿತ್ತು. ಸಾಧು ಸನ್ಯಾಸಿ-ಸಾಧಕರಿಗೆ

ದಿನಕ್ಕೆರಡು ಊಟ ಕೊಡುವ ಅನೇಕ ಸಂಸ್ಥೆಗಳು, ಆಶ್ರಮಗಳೂ ಋಷಿಕೇಶದಲ್ಲಿವೆ. ದಿನಕ್ಕೆರಡು ಊಟ, ವರ್ಷಕ್ಕೆರಡು ಜೊತೆ ಬಟ್ಟೆ, ಕಾಲಿಗೆ ಬೂಟು, ವರ್ಷಕ್ಕೊಂದು ಕಂಬಳಿ- ಇವನ್ನು ಸಾಧುಗಳಿಗೆ ವಿತರಿಸಲು ಅನೇಕ ಟ್ರಸ್ಟ್‌ಗಳನ್ನು ರಚಿಸಲಾಗಿದೆ. ಬಟ್ಟೆ ಹಾಸಿ ರಸ್ತೆಯುದ್ದಕ್ಕೂ ಕುಳಿತ ಸಾಧುಗಳನ್ನು ನೋಡಬಹುದು. ಬಂದ ಪ್ರವಾಸಿಕರು ಕೊಡುವ ಚಿಲ್ಲರೆ ಕಾಸು ಅವರ ಮೇಲಿನ ಖರ್ಚಿಗೆ ಆಗುತ್ತೆ. ಭಂಗಿ, ಅಫೀಮು ಸೇದಿ ಕೆಂಗಣ್ಣು ಮಾಡಿಕೊಂಡು ಮತ್ತೇರಿಸಿಕೊಂಡು ಕುಳಿತ ಸಾಧುಗಳಿಗೇನೂ ಕೊರತೆ ಇರದು. ಅಡ್ಡಾಡುವಾಗ ಅವರುಗಳು ಬೀರುತ್ತಿದ್ದ ದೃಷ್ಟಿಗೆ ಹೃದಯ ನಡುಗುತ್ತಿತ್ತು. ಹೀಗಾಗಿ ಋಷಿಕೇಶ ಸ್ವಾಮಿ ಶಿವಾನಂದರಂತಹ ಶ್ರೇಷ್ಠ ಮಹಾತ್ಮರ ತಪೋಭೂಮಿಯಾದಂತೆ ಸೋಮಾರಿಗಳ ಸ್ವರ್ಗವೂ ಆಗಿದೆ. ನಮಗೆ ಹಿಂದಿಯೂ ಬರದು ಮತ್ತು ಅಲ್ಲಿಯ ಪರಿಸರವೂ ಹೊಸದು. ಏನು ಮಾಡಬೇಕೆಂದು ತೋಚದೆ ಇರುವಾಗಲೇ ಒಂದು ಪತ್ರ ದಾವಣಗೆರೆಗೆ ಹೋಗಿ ಪುನರ್ ನಿರ್ದೇಶಿಸಲ್ಪಟ್ಟು ನಾವಿದ್ದ ಮೋಕ್ಷಾಶ್ರಮದ ವಿಳಾಸಕ್ಕೆ ಬಂದಿತು. ಮರುಭೂಮಿಯಲ್ಲಿ ನೀರಿಲ್ಲದೆ ಬಾಯಾರಿದವನಿಗೆ ಓಯಸಿಸ್ ಸಿಕ್ಕಂತೆ ಆಗಿತ್ತು. ಇದು ದೇವರ ಕೃಪೆ ಎಂದೇ ಭಾವಿಸಿದೆವು. ಆಂಧ್ರ ಪ್ರದೇಶದ ತಾಂಡೂರಿನ ಶರಣ. ಪರ್ವತಪ್ಪ ಕೋರವಾರ ಅವರ ಕಡೆಯಿಂದ ಬಂದ ಪತ್ರವಾಗಿತ್ತು. ಶ್ರಾವಣ ಮಾಸದಲ್ಲಿ ತಾಂಡೂರಿನಲ್ಲಿ ಶ್ರೀ ಭದ್ರೇಶ್ವರ ದೇವಾಲಯದಲ್ಲಿ ಪ್ರವಚನ ಮಾಡಲು ಆಮಂತ್ರಣ ಬಂದಿತ್ತು. ಒಪ್ಪಿಕೊಂಡು ಟೆಲಿಗ್ರಾಂ ಕೊಟ್ಟೆವು.

ಋಷಿಕೇಶದಿಂದ ಹೈದ್ರಾಬಾದಿಗೆ ಬಂದು, ಅಲ್ಲಿಯೂ ಪರ್ವತಪ್ಪನವರ ಮನೆ ಇತ್ತು. ಅಲ್ಲಿಂದ ತಾಂಡೂರಿಗೆ ಹೋಗುವುದಿತ್ತು. ಪ್ರಯಾಣಕ್ಕೆ ಹಣವಿರಲಿಲ್ಲ. ಮೋಕ್ಷಾಶ್ರಮದ ಮುಖ್ಯಸ್ಥರಾದ ಕೃಪಾನಂದ ಬ್ರಹ್ಮಚಾರಿ ಅವರ ಬಳಿ ಹೋದೆವು. ಊಟ ಮಾಡುವ ಬೆಳ್ಳಿ ತಟ್ಟೆಯೊಂದೇ ಇದ್ದ ಆಸ್ತಿ ಅದನ್ನು ಅವರಿಗೆ ಕೊಟ್ಟು, "ಒಂದು ಸಾವಿರ ರೂ. ಸಾಲ ಕೊಡಿರಿ. ಈ ಬೆಳ್ಳಿ ತಟ್ಟೆ ಇಟ್ಟುಕೊಳ್ಳಿರಿ. ಊರಿಗೆ ಹೋಗಿ ಹಣ ಕಳಿಸಿದ ಮೇಲೆ ತಟ್ಟೆ ಕಳಿಸಿರಿ." ಎಂದು ಹೇಳಿದೆವು. ಅವರು ನಕ್ಕು "ನಿಮ್ಮ ಬಗ್ಗೆ ವಿಶ್ವಾಸವಿದೆ. ಸನ್ಯಾಸಿಗಳಿಗೆ ಕೊಟ್ಟ ಹಣಕ್ಕೆ ಭದ್ರತೆ ಬೇಕೆ? ಹಣ ತೆಗೆದುಕೊಳ್ಳಿ. ನೀವು ಹೋದ ಮೇಲೆ ಕಳಿಸಿದರೂ ಆಯಿತು. ಕಳಿಸದಿದ್ದರೂ ಪರವಾಗಿಲ್ಲ." ಎಂದರು. ನಾವು ಕೃತಜ್ಞತೆಯಿಂದ ಧನ್ಯವಾದ ಹೇಳಿ ಆಶ್ರಮಬಿಟ್ಟು ಹೊರಟೆವು. ಎತ್ತರವಾದ ಬೆಟ್ಟಗಳ ಸಾಲು. ಅವುಗಳನ್ನು ಆಶ್ರಯಿಸಿ ಬೆಳೆದ ಮರಗಳು ಕೊಳ್ಳದಲ್ಲಿ ಹರಿಯುತ್ತಿದ್ದ ಗಂಗಾನದಿ, ಅದಕ್ಕೆ ಅಲ್ಲಲ್ಲೇ ತೂಗು ಸೇತುವೆ. ಬೆಟ್ಟಗಳ ಮೇಲೆ ಆಶ್ರಮಗಳ ಕಟ್ಟಡಗಳು. ಋಷಿಕೇಶದ ಪರಿಸರದಲ್ಲಿ ವಿಶೇಷ ಆಕರ್ಷಣೆಯಿದೆ. ಒಮ್ಮೆ ಭಾರಿ ಮಳೆ ಮಿಂಚು, ಗುಡುಗು, ಸಿಡಿಲುಗಳೊಡನೆ ಪ್ರಚಂಡವಾಗಿ ಬಂದಿತು. ಗಂಗೆ ರುದ್ರ ಭಯಂಕರ ನೋಟವನ್ನು ಒದಗಿಸಿತ್ತು.

ಮಳೆ ನಿಂತ ಮೇಲೆ ಗಂಗಾನದಿಯ ಆರ್ಭಟ ನೋಡಲು ಜನಸಾಗರವು ಲಕ್ಷ್ಮಣ ಝೂಲಾ ಹತ್ತಿರ ಬಂದು ಸೇರಿತ್ತು. ಲಕ್ಷ್ಮಣ ಝೂಲಾ ಒಂದು ತೂಗು ಸೇತುವೆ ಬ್ರಿಟಿಷರ ಕಾಲದ್ದು. ವಾಹನಗಳು ಹೋಗುವಂತಿಲ್ಲ. ಕಾಲ್ನಡಿಗೆಯಲ್ಲಿ ಅದರ ಮೇಲೆ ಅಡ್ಡಾಡಬಹುದು. ಗಂಗಾನದಿಯ ರುದ್ರ ಭಯಂಕರ ರೂಪವನ್ನು ನೋಡಿ ಒಂದು ಪದ್ಯವನ್ನು ಬರೆದೆ.

ಹೇ...... ರುದ್ರ ಕನ್ಯೆ , ಹೇ.......ರುದ್ರ ಕನ್ಯೆ
ಯಾರೊಡನೆ ಈ ಕಲಹ, ಏತಕಾಗಿ ಈ ಮೊರೆತ
ಮರೆಯುತಿಹೆ ನಿನ್ನ ನೀ ಮೊರೆವ ಆರ್ಭಟದೊಳಗೆ ॥
ಹರನ ತೊಡೆಯನೇರಿನಿಂದ ಗೌರಿಯೊಡನೆ ಕಲಹವೇ ?
ಶಿರಮುಕುಟದಿ ಮೆರೆವ ನಿನಗೆ ಸವತಿಯಾ ವಿರಸವೇಕೆ ?
ಪ್ರಕೃತಿಯು ಗುಡುಗುಡಿಸಿ ಪವನನೊಡನೆ ಸಹಕರಿಸೆ
ಸುಕೃತರೂಪಿ ನೀರೆ ನೀನುದಿಸಿಬರುವೆ ಅವನಿತಳಕೆ ॥
ಪರ್ವತರಾಜ ಕುವರಿಯಾ ಗರ್ವದಿಂದ ತೆಗಳುತಿಹೆ
ಸರ್ವ ರೌದ್ರವಕೊಂಡು ಭೈರವಿಯಾ ತೆರದಲಿ ॥
ಅವಳ ಮುಡಿಯನ್ನಿಡಿದು ತರಿದೆ ತರತರದಾ ತರುವ ಕೊಂಡು
ಅವಳ ನಿರಿಯನ್ನಿಡಿದೆಳೆದೆ ಬಗೆಬಗೆಯಾ ಹಸಿರು ತರಿದು ॥
ಅವಳ ಒಡಲನಪ್ಪಳಿಸುತಾ ತೆವಳಿ ನಿನ್ನ ಮಡಿಲಿನೊಳಗೆ
ಸವೆದು ಉರುಳುವಂತೆ ಮಾಡ್ವೆ ನೀರೆ ಏನಿದೀ ರೌದ್ರ ?

ಪಿತನೊಡನೆ ಜಗಳವೆಂದು ಸುತೆಯೆ ನೀನು ತೆರಳುತಿಹೆ.
ಪತಿ ಮನೆಗೆ ಭರದಿಂದ ಜೊತೆಯೊಳಗೆ ಕಲಹ ದೂರನ್ನೊತ್ತು
ಗೌರಿಯೊಡನೆ ವಿರಸವಾಗೆ ಕಾರುತಿಹೆಯ ಮೊರೆವ ಹೂಂಕಾರ
ಮೋರೆಯೊಳೇಕೆ ಇಂಥಾ ರೌದ್ರ ನೀರೆ ತೋರೆ ನಸು ನಗೆಯ ಮೊಗವ
ಗಿರಿಯ ಮುಡಿಯನಿಳಿದು ನಿಂದು ಋಷಿಕೇಶದಿ ಮೊರೆದು ನಿಂದು
ಹರಿವ ಒಯ್ಯಾರವ ತೋರಿ ಬಯಲಿನೊಳಗೇ ಮೆರೆದು ಮೆರೆದು ॥
ರೌದ್ರವೇಕೆ ಹೇ ಭದ್ರೆ ಸುಮುದ್ರೆಯಿರಲಿ ಮೋರೆಯೊಳು
ಕ್ಷುದ್ರ ಕಲಹವನುಳಿದು ಭಾಮೆ ಛಿದ್ರ ಮನವನುಳಿದು ನೀನು ॥
ಪ್ರಕೃತಿ ಶಕ್ತಿ ಮೆರೆಯುತಿರಲು ಹಿರಿಯಳೆಂಬಾರ್ಭಟವ ಬಿಡು
ವಿಕೃತ ರೂಪವಂ ತೊರೆದು ನಸುನಗೆಯಿಂ ಪ್ರಿಯನ ಬಳಿಗೆ ॥
ತೆರತೆರಳು ನೀರೆ ಗಂಗಾ....... ಉತ್ತುಂಗ ಶೃಂಗದ್ವಯದ ಮಧ್ಯೆ
ಹೊರಹೊರಳಿ ಉರಗ ತೆರದಿ ನರ್ತಿಸುತಾ ಸಚ್ಚಿದಾನಂದನೆಡೆಗೆ.

ಋಷಿಕೇಶದ ಸವಿ ನೆನಪು ಹೊತ್ತು ಮನಸ್ಸಿಲ್ಲದ ಮನಸ್ಸಿನಿಂದ ಕರ್ತವ್ಯದ ಕರೆಗೆ ಓಗೊಟ್ಟು ಹೊರಟೆವು. ಹೈದರಾಬಾದಿನ ಹನುಮಾನ್ ಟೇಕಡಿಯಲ್ಲಿರುವ ಪರ್ವತಪ್ಪ ಕೋರವಾರ ಮನೆಗೆ ಸೈಕಲ್ ರಿಕ್ಷಾದಲ್ಲಿ ಬಂದಿಳಿದೆವು. ಬಾಡಿಗೆ ಕೊಡಲು ಹಣ ಇಲ್ಲದಷ್ಟು ಕೈ ಖಾಲಿಯಾಗಿತ್ತು. ಪರ್ವತಪ್ಪನವರ ಶ್ರೀಮತಿ ಭಾಗೀರಥಮ್ಮ ರಿಕ್ಷಾ ಬಾಡಿಗೆ ಕೊಟ್ಟರು. ನಮ್ಮನ್ನು ಆದರದಿಂದ ಉಪಚರಿಸಿದರು. ಪೂಜ್ಯ ಅಪ್ಪಾಜಿ ಮೇಲೆ ಅಪಾರ ಭಕ್ತಿ -ಗೌರವ. ಏಕೆಂದರೆ ಈಗಾಗಲೇ ಎರಡು ಸಲ ತಾಂಡೂರಿನಲ್ಲಿ ಪ್ರವಚನಗಳಾಗಿದ್ದವು. ದಾವಣಗೆರೆಯಲ್ಲಿ ಕಟ್ಟಿದ ಮಠಕ್ಕೆ ತಾಂಡೂರಿನ ಭಕ್ತರೂ ಕಾಣಿಕೆ ಕೊಟ್ಟಿದ್ದರು. ದಾವಣಗೆರೆಯಲ್ಲಿ ನಡೆದ ಘಟನೆ ಕೇಳಿ ಭಾಗೀರಥಮ್ಮ ಕಣ್ಣೀರು ಹಾಕಿದರು. ಪ್ರವಚನ ಸಿದ್ಧತೆಗಾಗಿ ತಾಂಡೂರಿಗೆ ಹೋಗಿದ್ದ ಪರ್ವತಪ್ಪನವರು ಮರಳಿ ಬಂದರು. ಅವರಿಗೂ ಎಲ್ಲವನ್ನೂ ಸವಿಸ್ತಾರವಾಗಿ ತಿಳಿಸಿದ್ದಾಯಿತು.

ಪರ್ವತಪ್ಪ-ಭಾಗೀರಥಮ್ಮನವರಿಗೆ ಸಾಲಾಗಿ ಏಳು ಹೆಣ್ಣು ಮಕ್ಕಳು. ಗಂಡುಮಕ್ಕಳಿರಲಿಲ್ಲ. ತಾಂಡೂರು-ಹೈದರಾಬಾದ್ ಎರಡೂ ಕಡೆ ಆಸ್ತಿ-ಪಾಸ್ತಿ ಇದ್ದವು. ರಾಜಕೀಯವಾಗಿ ಪ್ರಭಾವಶಾಲಿಗಳು. ಮಗನಿಲ್ಲದ ಕೊರಗು ಕಾಡುತ್ತಿತ್ತು. ಒಂದು ದಿವಸ ವಿಶೇಷವಾಗಿ ಇಷ್ಟಲಿಂಗಾರ್ಚನೆ ಮಾಡಿ ದಂಪತಿಗಳನ್ನು ಆಶೀರ್ವದಿಸಲಾಯಿತು. ಮುಂದೆ ಅವರು ಗರ್ಭವತಿಯಾದರು. ನಂತರ ಲಿಂಗಾಯತ ಧರ್ಮದ ವಿಶೇಷ ಆಚರಣೆಯಾದ ಗರ್ಭಲಿಂಗಧಾರಣೆ ಮಾಡಲಾಯಿತು. ಗಂಡು ಮಗು ಹುಟ್ಟಿದಾಗ ದಂಪತಿಗಳ ಆನಂದಕ್ಕೆ ಪಾರವೇ ಇರಲಿಲ್ಲ. ನಮ್ಮನ್ನು ಆಹ್ವಾನಿಸಿ ನಾಮಕರಣ ಸಹ ಮಾಡಿಸಿದರು.

ತಾಂಡೂರಿನಲ್ಲಿ ದಿ.15-8-1966ರಿಂದ ಪೂಜ್ಯ ಅಪ್ಪಾಜಿ ಪ್ರವಚನ ಪ್ರಾರಂಭಿಸಿದರು. ನಾನು ಆರಂಭದಲ್ಲಿ ಇಲ್ಲವೆ ಪ್ರವಚನದ ಕಡೆಯಲ್ಲಿ ನಾನು ಬರೆದ ಗೀತೆಗಳನ್ನು ಹಾಡುತ್ತಲಿದ್ದೆ. ಈ ಪ್ರವಚನವು ನಮ್ಮ ಜೀವನದಲ್ಲಿ ಬಹಳ ಮಹತ್ವದ ಪಾತ್ರ ವಹಿಸಿತು. ಇಲ್ಲದಿದ್ದರೆ ಜೀವನವು ಯಾವ ತಿರುವು ಪಡೆಯುತ್ತಿತ್ತೊ!

ಊರ ಹೊರಗಿನ ತೋಟದಲ್ಲಿ ಉಳಿಯಲು ಅವಕಾಶ ಮಾಡಿ ಕೊಟ್ಟಿದ್ದರು. ವಿಸ್ತಾರವಾದ ತೆರೆದ ಭಾವಿಯಲ್ಲಿ ಪೂಜ್ಯ ಅಪ್ಪಾಜಿ ಮತ್ತು ಶಿಷ್ಯರು ಮನವಾರೆ ಈಜಾಡುತ್ತಿದ್ದರು. ಪ್ರಸಾದವು ಕೋರವಾರ ಅವರ ಮನೆಯಿಂದ ಬರುತ್ತಿತ್ತು. ಹೀಗಾಗಿ ಅಧ್ಯಯನಕ್ಕೆ ವಿಪುಲವಾದ ಅವಕಾಶ ಸಿಕ್ಕುತ್ತಿತ್ತು. ಸಂಜೆ ವಾಯುವಿಹಾರಕ್ಕೆ ಹೋಗುತ್ತಿದ್ದೆವು. ನಾನು ಬಹಳ ವೇಗವಾಗಿ ನಡೆಯುತ್ತಲಿದ್ದೆ. ಪೂಜ್ಯ ಅಪ್ಪಾಜಿ ಸಹ ವೇಗವಾಗಿ ನಡೆಯುತ್ತಿದ್ದರಾದರೂ ನನ್ನ ಸಮಕ್ಕೆ ನಡೆಯಲು ಆಗುತ್ತಿರಲಿಲ್ಲ ಎಂದರೆ ಎಲ್ಲರಿಗೂ ಅಚ್ಚರಿಯಾಗುವುದಲ್ಲವೆ ? ಆದರೂ ಇದು ಸತ್ಯ. ಒಮ್ಮೆ ತಾಂಡೂರಿನಲ್ಲಿ ಒಂದು ನಡೆಯುವ ಸ್ಪರ್ಧೆ ಇಟ್ಟೆವು. 3 ಕಿ.ಮೀ ನಡೆಯಲು ನಿರ್ಧರಿಸಿದೆವು. ನಾನು ಮೊದಲನೆಯವಳು, ಪೂಜ್ಯ ಅಪ್ಪಾಜಿ ಎರಡನೆಯವರು. ಹೈಸ್ಕೂಲ್ ಮಾಸ್ತರ್ ಜನರು ಒಂದು ಕಿ.ಮೀ ಹಿಂದಿದ್ದರು. ನಮ್ಮ ಮನೆಗೂ ಕಾಲೇಜಿಗೂ ಬಹಳ ದೂರ. ನಾನು ತುಂಬಾ ತೆಳ್ಳಗೆ ಇದ್ದುದು ಒಂದಾದರೆ ದಿನ ನಿತ್ಯ ಕಾಲೇಜಿಗೆ ನಡೆದುಹೋಗಿ ಅಭ್ಯಾಸವಿದ್ದುದು ಈ ವೇಗಕ್ಕೆ ಎರಡನೆಯ ಕಾರಣ.

ಒಂದು ದಿವಸ ಕೆಲವು ಪ್ರಮುಖರು ಬಂದು ಪ್ರವಚನವಾಗುವಾಗ ಭೇಟಿಯಾಗಿ, "ನಮ್ಮೂರಿಗೆ ಮಳೆಯೇ ಆಗಿಲ್ಲ. ಕುಡಿಯುವ ನೀರಿಗೂ ಸಂಕಷ್ಟ. ಕೆರೆ ಬರಿದು ನಿಂತಿದೆ. ದನಕರುಗಳು ನೀರಿಲ್ಲದೆ ಕಂಗಾಲಾಗಿವೆ. ದಯವಿಟ್ಟು ಮಳೆ ಬರುವಂತೆ ಮಾಡಿರಿ." ಎಂದು ಪೂಜ್ಯ ಗುರುಗಳ ಮುಂದೆ ಬಿನ್ನವಿಸಿಕೊಂಡರು. ಪೂಜ್ಯ

ಅಪ್ಪಾಜಿ ನನ್ನ ಕಡೆ ಕೈ ತೋರಿಸಿ "ಇವರಲ್ಲಿ ವಿನಂತಿಸಿರಿ" ಎಂದರು. ಅದೇ ವಿಷಯವನ್ನು ನನ್ನ ಬಳಿ ಹೇಳಿದರು. "ಪ್ರಯತ್ನಿಸೋಣ ದೇವರ ಇಚ್ಛೆ" ಎಂದು ಹೇಳಿದೆ. ಯಾರ ಕಡೆಯಿಂದಲೋ ಒಂದು ಹಾಳೆ ಪಡೆದು ಒಂದು ಪದ್ಯ ಬರೆದೆ. ಆಗಲೆ ಪ್ರವಚನದಲ್ಲಿ ಆ ಪದ್ಯವನ್ನು ಹಾಡಿದೆ.

ಧಾರಯಿಸು ಹೇ ಗಂಗೆ.........ಧರೆಯು ಬೆಂದಿಹುದು.
ಮಾರಹರ ಶಿವನ ಸಿರಿ ಮುಡಿಯ ತಳದಿಂದ ॥ಪ॥

ಮಲ್ಲೆ ಮಲ್ಲಿಗೆ ಜಾಜಿ ಬಿಳುಪೇರಿ ನಿಂದಿಹವು
ಹುಲ್ಲು ಕಳವೆಗಳೆಲ್ಲ ಬಣ್ಣಗಳ ಕಳಕೊಂಡು ॥

ತೆಂಗು ಬಾಳೆಗಳೆಲ್ಲ ಕಂಗೊಳಿಪ ರೂಪಿರದೆ
ರಂಗಿಲ್ಲದ ವನಿತೆಯರಂತೆ ಶೋಭಿಸುತಿಹವು ॥

ಜೀವಿಗಳ ಕರುಳ ಕರೆ ಕಿವಿಗೆ ಕೇಳದಿಹುದೇ
ರವಿಕಿರಣ ಬಲೆಯಲ್ಲಿ ಜಗವು ಬೆಂದಿಹುದು ॥

ಬೆಳ್ಗದಿರ ಬೇಸಗೆಯು ಮನವ ತಾಪದಲಿಡಲು
ಕಳಕಳಿಯ ಪ್ರಾರ್ಥನೆಯು ನಿನಗೆ ಸಂದಿಹುದು ॥

ಭೂಮಿಯು ಬಿರಿದಿರಲು ಬಾಯ್ತೆರೆದು ನಿಂತಿರಲು
ಭಾಮೆ ಕರುಣೆ ತೋರೆ, ಬಾರೆ ಸಚ್ಚಿದಾನಂದ ನೀರೆ. ॥

ದೈವೀ ಲೀಲೆ ಎಂಬಂತೆ ಮಳೆ ಸುರಿಯಿತು. ಮಳೆ ನಿಂತ ಮೇಲೆ ಜನರು ಪ್ರವಚನದಿಂದ ಹೋದರು. ಅವತ್ತು ಪರ್ವತಪ್ಪನವರ ಊರೊಳಗಿನ ಮನೆಯಲ್ಲೇ ಉಳಿದುಕೊಂಡೆವು. ಪೂಜ್ಯ ಅಪ್ಪಾಜಿ, "ನೀವು ಪವಾಡ ಮಾಡಿದಿರಿ, ಆದರೆ ಇದರಿಂದ ಜನತೆಗೆ ಕಲ್ಯಾಣವಾಗಲಿಲ್ಲ. ಮಳೆ ಸಾಕಷ್ಟು ಬಂದರೆ ಮಾತ್ರ ಭೂಮಿ ಸಂತೃಪ್ತಿ ಹೊಂದಿ ಬೆಳೆಗಳಿಗೆ ಅನುಕೂಲವಾಗುವುದು. ಪವಾಡವು ಜನತೆಗೆ ಅಚ್ಚರಿಗೊಳಿಸುವುದರ ಸಲುವಾಗಿ ಇರಬಾರದು. ಲೋಕ ಕಲ್ಯಾಣವಾಗುತ್ತಿದ್ದರೆ ಮಾತ್ರ ಪವಾಡ ಮಾಡಬೇಕು" ಎಂದು ಹೇಳಿ ಮಲಗಿಕೊಂಡರು. ನಾನು ಪವಾಡ ಮಾಡಬೇಕೆಂಬ ಉದ್ದೇಶದಿಂದ ಪ್ರಯತ್ನಿಸಿರಲಿಲ್ಲ. ದೈವೀ ಶರಣಾಗತಿಯಿಂದ ಪ್ರಾರ್ಥಿಸಿದ್ದೆ. ಇಷ್ಟಲಿಂಗಪೂಜೆ ಮಾಡಿದೆ. ಪ್ರಸಾದ ಸ್ವೀಕಾರ ಮಾಡಲಿಲ್ಲ. ಮಳೆ ಬರುವವರೆಗೂ ಮಲಗುವುದಿಲ್ಲವೆಂದು ಧ್ಯಾನಾಸಕ್ತಳಾಗಿ ಜಪ ಮಾಡುತ್ತ ಕುಳಿತೆ. "ದೇವರೆ, ನಿನ್ನ ಲೀಲೆಯನ್ನು ಪ್ರದರ್ಶಿಸು. ಇಂಥ ಘಟನೆಗಳ ಮೂಲಕವಾಗಿಯೇ ನಿನ್ನ ನಂಬುಗೆ ಬಲಗೊಳ್ಳುವುದು." ಎಂದು ಅನನ್ಯವಾಗಿ ಪ್ರಾರ್ಥಿಸುತ್ತಿದ್ದೆ. ರಾತ್ರಿ ಎರಡು ಗಂಟೆ ಸುಮಾರಿಗೆ ಮಿಂಚು, ಗುಡುಗು, ಸಿಡಿಲಿನ ಆರ್ಭಟದೊಡನೆ ಮಳೆ ಧಾರಾಕಾರವಾಗಿ ಸುರಿಯಲು ಆರಂಭಿಸಿತು. ನಾನು ನೆಮ್ಮದಿಯಿಂದ ಮಲಗಿದೆ, ಸಚ್ಚಿದಾನಂದನ ಲೀಲೆಯನ್ನು ಕೊಂಡಾಡುತ್ತ. ಬೆಳಿಗ್ಗೆ ನೋಡಿದರೆ ತಾಂಡೂರಿನ ಬೃಹತ್ ಕೆರೆ ತುಂಬಿ ತುಳುಕುತ್ತಿತ್ತು. ಹಿಂದಿನ ದಿನ ಬಿರಿದ ನೆಲವನ್ನು ನೋಡಿ ಬಂದಿದ್ದೆವು. ಸಂಭ್ರಮದಿಂದ ಜನರು ತುಂಬಿದ ಕೆರೆ ತೋರಿಸಲು ನಮ್ಮನ್ನು ಕರೆದೊಯ್ದರು.

ತಾಂಡೂರು ಪ್ರವಚನ ಅದ್ದೂರಿಯಾಗಿ ನಡೆಯಿತು. ಮುಕ್ತಾಯಕ್ಕೆ ಅನೇಕ ಮಂತ್ರಿಗಳನ್ನು ಪರ್ವತಪ್ಪ ಆಹ್ವಾನಿಸಿದ್ದರು. ಪ್ರವಚನ ನಡೆದಾಗ ಒಂದು ಘಟನೆ ನಡೆಯಿತು. ಒಂದು ದಿನ ಪೋಲೀಸರು ಕಾಣಿಸಿದರು. ಬಂದೋಬಸ್ತಿಗೆ ಬಂದಿರಬಹುದೆಂದು ಅಂದುಕೊಂಡೆವು. ನಂತರ ವಿಷಯ ತಿಳಿಯಿತು. ನಾವು ಆಂಧ್ರಪ್ರದೇಶದ ತಾಂಡೂರಿಗೆ ಬಂದು ಪ್ರವಚನ ಮಾಡುವ ವಿಷಯ ದಾವಣಗೆರೆಯ ನಮ್ಮ ವಿರೋಧಿಗಳಿಗೆ ತಿಳಿದು ಬಂದು ಒಂದು ಪೋಲೀಸ್ ಕಂಪ್ಲೇಂಟ್ ನಮ್ಮ ವಿರುದ್ಧ ಕೊಟ್ಟಿದ್ದರು. "ನಾವು ಮಠದಲ್ಲಿ ಕಳ್ಳತನ ಮಾಡಿ ಓಡಿ ಬಂದಿದ್ದೇವೆ." ಎಂದು. ಪ್ರಭಾವಶಾಲಿಗಳಾದ ಪರ್ವತಪ್ಪ ಸಮಜಾಯಿಷಿ ಹೇಳಿ "ಇವರು ನಮ್ಮ ಗುರುಗಳು. ಬಹಳ ದೊಡ್ಡವರು." ಎಂದು ಹೇಳಿಕಳಿಸಿ 'ಬಿ' ರಿಪೋರ್ಟ್ ಹಾಕಿಸಿದ್ದರು.

ಮುಂದಿನ ಹಾದಿಯ ಬಗ್ಗೆ ಪರ್ವತಪ್ಪನವರೊಡನೆ ಚಿಂತಿಸಿದೆವು. ಆಗ ಅವರು ನಮ್ಮನ್ನು ತಾಂಡೂರಿನಲ್ಲೇ ಬಿಟ್ಟು ಕಾರಿನಲ್ಲಿ ನಮ್ಮ ತಾತಂದಿರ ಬಳಿ ಚಿತ್ರದುರ್ಗಕ್ಕೆ ಹೋದರು. ನಾನು ಮನೆ ಬಿಟ್ಟ ಮೇಲೆ ಮನೆಯ ಸಂಪರ್ಕವನ್ನೇ ಇಟ್ಟುಕೊಂಡಿರಲಿಲ್ಲ. ಪೂಜ್ಯ ಗುರುಗಳ ಮೇಲೆ ನಮ್ಮ ತಾತಂದಿರಿಗೆ ಸಿಟ್ಟು ಬೇರೆ ಇತ್ತು. ಪರ್ವತಪ್ಪ ಅವರಿಗೆ ವಿಷಯ ಮನವರಿಕೆ ಮಾಡಿಕೊಟ್ಟರು. ಈಗ ನೆರವು ನೀಡದೆ ಗತ್ಯಂತರವಿಲ್ಲ ಎಂದು

ತಿಳಿಸಿಕೊಟ್ಟರು. ಅವರಿಗೂ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಯುತ್ತಿದ್ದ ಸ್ವಾಮಿಗಳ ಗೂಂಡಾಗಿರಿ ಬಗ್ಗೆ ತಿಳಿದೇ ಇತ್ತು. ಸಮಾಜ ಎಷ್ಟು ಒಡೆದಿತ್ತು ಎಂದರೆ ತರಳಬಾಳು ಹುಣ್ಣಿಮೆಗೆ ಲಿಂಗಾಯತ ಸಾದರಲ್ಲದವರು ಹೋಗಬಾರದು ಎಂಬ ಅಲಿಖಿತ ನೇಮ; ಮನೆಯಲ್ಲಿ ನಿರ್ಬಂಧ ವಿಧಿಸಿದ್ದರು. ನಂತರ ಪೂಜ್ಯ ಲಿಂಗಾನಂದ ಸ್ವಾಮಿಗಳ ಶಿಷ್ಯತ್ವ ಸ್ವೀಕರಿಸುತ್ತೇನೆ ಎಂದು ತಿಳಿದಾಗ ನಮ್ಮ ತಾತ, "ನಿನಗೇನು ತಲೆ ಕೆಟ್ಟಿದೆಯೇ? ಹೋಗಿ ಹೋಗಿ ಆ ಸಾದರ ಸ್ವಾಮಿಯ ಶಿಷ್ಯಳಾಗುತ್ತೀಯ ? ನಾವೆಲ್ಲ ಮುರುಘಾಮಠದವರು. ಬೇಕಾದರೆ ಇಲ್ಲೇ ದೀಕ್ಷೆ ಕೊಡಿಸುತ್ತೇವೆ." ಎಂದಿದ್ದರು. "ಸ್ವಾಮಿಗಳು ಯಾವ ಉಪಜಾತಿಯವರೋ ಗೊತ್ತಿಲ್ಲ. ಗುರುಗಳನ್ನು ಜಾತಿ ಆಧಾರದ ಮೇಲೆ ಆಯ್ಕೆ ಮಾಡಬಾರದು, ಜ್ಞಾನದ ಆಧಾರದ ಮೇಲೆ ಆರಿಸಿಕೊಳ್ಳಬೇಕು" ಎಂದು ತಾತಂದಿರಿಗೆ ಉತ್ತರಿಸಿದ್ದೆ. ಪೂಜ್ಯ ಅಪ್ಪಾಜಿ ಆಗಾಗ ಒಂದು ಮಾತನ್ನು ಹೇಳುತ್ತಿದ್ದರು, "ಸಿರಿಗೆರೆಯವರು ಮೊದಲು ನನಗೆ ತುಂಬಾ ಪ್ರೋತ್ಸಾಹ ನೀಡಿದರು. ತರಳಬಾಳು ಹುಣ್ಣಿಮೆಗೆ ತಪ್ಪದೆ ಕರೆಸುತ್ತಿದ್ದರು. ನನ್ನ ಭಾಷಣಕ್ಕೆ ಆದ್ಯತೆ ಕೊಡುತ್ತಿದ್ದರು. ಬಹುಶಃ ನಾನು ಸಾದರವನೆಂದು ತಿಳಿದಿದ್ದರೇನೋ. ನಂತರ ನಾನು ಅದಲ್ಲವೆಂದು ತಿಳಿದುಬಂದು ಕೈಬಿಟ್ಟರು ಅಂತ ನನ್ನ ಊಹೆ."

ಪರ್ವತಪ್ಪ ಮರಳಿ ಬಂದ ನಂತರ ತಾಂಡೂರಿನಿಂದ ನಮ್ಮನ್ನು ಬೀಳ್ಕೊಟ್ಟರು. ಚಿತ್ರದುರ್ಗಕ್ಕೆ ಬಂದು ಮನೆಯಲ್ಲೇ ಉಳಿದುಕೊಂಡೆವು. ಆ ವೇಳೆಗಾಗಲೇ ನಾನು ಬರೆದ ಮಾತೃವಾಣಿ, ವಿರಹ ತರಂಗ ಪ್ರಚಾರಗೊಂಡಿದ್ದವು. ವಕೀಲ ಶಿವಣ್ಣನವರ ಧರ್ಮಪತ್ನಿ ರಾಜಮ್ಮ .ಮೈಸೂರಿನವರು ಅವರಿಂದಾಗಿ ಮೈಸೂರಿನಲ್ಲಿ ಪೂರ್ವಾಶ್ರಮದ ಬಂಧುಗಳು ಬಹಳ. ಅವರೆಲ್ಲರ ಮೂಲಕ ಪ್ರವಚನದ ಪ್ರಭಾವ ತಿಳಿದು ಬಂದಿತ್ತು. ಹೀಗಾಗಿ ತಾತಂದಿರ ಸಿಟ್ಟು ಶಮನವಾಗಿತ್ತು. ಇದೇ ಸಮಯದಲ್ಲಿಯೇ ಚಿತ್ರದುರ್ಗದ ರೋಟರಿ ಸಂಸ್ಥೆಯವರು ವಿಶೇಷ ಸನ್ಮಾನವನ್ನು ಇಟ್ಟುಕೊಂಡರು. ಡಾ|| ಪದ್ಮನಾಭನ್‌ರವರು ಶಾಲು ಹೊದ್ದಿಸಿ, ನೆನಪಿನ ಕಾಣಿಕೆ ನೀಡಿದ್ದಲ್ಲದೆ ವಿಶೇಷವಾದ ಒಂದು ಕಾಗದದ ಗುಚ್ಛವನ್ನು ಕೊಟ್ಟರು. "ಮಾತೆಯವರು ಜಿಲ್ಲಾ ರೋಟರಿ ಸಂಸ್ಥೆ ಏರ್ಪಡಿಸಿದ ಒಂದು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. 'ನನ್ನ ಭವಿಷ್ಯ ಜೀವನದ ರೂಪುರೇಷೆಗಳು' ಎಂಬ ಪ್ರಬಂಧ ವಿಷಯ ಆಯ್ದುಕೊಂಡು (ಇನ್ನೊಂದು ವಿಷಯ-ನಾನು ಪ್ರಧಾನಿಯಾದರೆ? ಎಂಬುದಾಗಿತ್ತು.) ಪ್ರಬಂಧ ಬರೆದಿದ್ದರು. ಅದನ್ನು ಮೌಲ್ಯಮಾಪನ ಮಾಡುವಾಗ ನನಗೆ ಈ ಲೇಖನ ಹಾಗೂ ಬರೆದ ವ್ಯಕ್ತಿ ವಿಶೇಷವೆನಿಸಿತು. ಮೊದಲ ಬಹುಮಾನವನ್ನು ಲೆಫ್ಟಿನೆಂಟ್ ಗೌರ್ನರ್ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಪ್ರದಾನ ಮಾಡಿದರು. ಲೇಖನವನ್ನು ನಾನು ಜೋಪಾನವಾಗಿ ಇಟ್ಟಿದ್ದೆ. ಅದನ್ನೀಗ ಕೊಡುತ್ತಿದ್ದೇನೆ." ನನಗೆ ಆಶ್ಚರ್ಯ! ನನ್ನ ಅಂತರಾತ್ಮ ಮೊದಲೇ ನುಡಿಸಿತ್ತು ಅಂತ ಇದರಿಂದ ತಿಳಿಯುತ್ತದೆ.

ತಾತಂದಿರ ಜೊತೆ ಚರ್ಚಿಸಿದ್ದಾಯಿತು. ವಿರೋಧಿಗಳ ಮಧ್ಯೆ ಬೆಳೆಯಲಿಕ್ಕೂ ಸಾಧ್ಯವಿಲ್ಲ. ಬಲಿಷ್ಠರ ಗೂಂಡಾಗಿರಿಯ ಮಧ್ಯೆ ಕಾನೂನಿನ ನೆರವು ನಮ್ಮ ದೇಶದಲ್ಲಿ ಸಿಗುವುದಿಲ್ಲ. ಪ್ರವಚನ ಕೇಳಿದ ಭಕ್ತರು ಜಿಂಕೆ, ಮೊಲಗಳಂತೆ ಮುಗ್ಧರು, ನಿಸ್ಸಹಾಯಕರು. ತಮ್ಮ ಗುರುಗಳಿಗೆ ಬಂದ ಸಂಕಷ್ಟ ನೋಡಿ ಕಣ್ಣೀರು ಹಾಕುವವರು. ವಿರೋಧಿಗಳೋ ಹುಲಿಗಳಂತೆ ಬಲಿಷ್ಠರು, ಹಿಂಸಾವಾದಿಗಳು. ಏನು ಮಾಡಬೇಕು? ಪೂಜ್ಯ ಅಪ್ಪಾಜಿಯವರು, "ನಾನು ಬಸವ ತತ್ವ ಪ್ರಚಾರ ಮಾಡಿ ಗಳಿಸಿದ ಮಠವಿದು. ಉಚಿತವಾಗಿ ದಾನರೂಪದಲ್ಲಿ ಬೇಕಾದರೂ ಬರೆದುಕೊಡುತ್ತೇನೆ." ಎಂದು ಬೆಂಗಳೂರಿನ ಬಸವ ಸಮಿತಿಗೆ ಬರೆದುಕೊಡುವುದಾಗಿ ಶರಣ. ಬಿ.ಡಿ.ಜತ್ತಿಯವರನ್ನು ಕಂಡು ಪೂಜ್ಯ ಗುರೂಜಿ ವಿನಂತಿಸಿದರು. ಅವರ ಮನೆಯಲ್ಲೇ ಉಳಿದು ಈ ವಿಷಯ ಪ್ರಸ್ತಾಪಿಸಲಾಯಿತು. ಆದರೆ ಬಲಿಷ್ಠ ಸ್ವಾಮಿಗಳ ವಿರುದ್ಧ ಆಸ್ತಿಯನ್ನು ತೆಗೆದುಕೊಳ್ಳಲು ಅವರು ಧೈರ್ಯ ಮಾಡಲಿಲ್ಲ. ಹೀಗಾಗಿ ನಿರಾಶೆಯಿಂದ ಮರಳಬೇಕಾಯಿತು. (ಮುಂದುವರೆಯುವುದು.)

ಬನಹಟ್ಟಿಯಲ್ಲಿ ವಿಶ್ವಧರ್ಮ ಪ್ರವಚನ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೋಕಿನ ಬನಹಟ್ಟಿ ನೇಯ್ಗೆ ಉದ್ಯೋಗದ ಪ್ರಮುಖ ಪಟ್ಟಣ. ದಿ.1-2-2012ರಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನವು ನಗರದ ಈಶ್ವರಲಿಂಗ ಮೈದಾನದಲ್ಲಿ ಪ್ರಾರಂಭವಾಯಿತು. ಪ್ರತಿನಿತ್ಯ ಸಂಜೆ 6-30 ರಿಂದ 8-30ರವರೆಗೆ ನಡೆದ ಪ್ರವಚನ ದಿನದಿನಕ್ಕೂ ಸಹಸ್ರಾರು ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸಿತು. ದಿ. 04-03-2012 ರಂದು ಪ್ರವಚನ ಮಂಗಲಗೊಂಡಿತು. ಪ್ರಥಮ ಮಹಿಳಾ ಜಗದ್ಗುರು ಮಾತೆ ಮಹಾದೇವಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಉಭಯ ಗುರುಗಳನ್ನು ಮೆರವಣಿಗೆಯಲ್ಲಿ ಸ್ವಾಗತಿಸಲಾಯಿತು. ಪ್ರವಚನವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ವೀರ ವಿರಾಗಿಣಿಯೆಂಬೋ ಆತ್ಮ 'ತರಂಗಿಣಿ'

'ತರಂಗಿಣಿ' ನಾನು ಬರೆದ ಎರಡನೆಯ ಕಾದಂಬರಿ. ಮೊದಲ ಕಾದಂಬರಿ ಹೆಪ್ಪಿಟ್ಟ ಹಾಲು. ಅದು ಸಾಮಾಜಿಕ ಮತ್ತು ಅಧ್ಯಾತ್ಮಿಕ ವಿಷಯವನ್ನೊಳಗೊಂಡಿದ್ದರೆ ತರಂಗಿಣಿ ಸಂಪೂರ್ಣವಾಗಿ ಅಧ್ಯಾತ್ಮಿಕ. ಮೊದಲ ಕಾದಂಬರಿಯನ್ನು ಬರೆದು ಪ್ರಕಟಿಸದೆ ಮುಚ್ಚಿಟ್ಟುಕೊಂಡಿದ್ದೆ. ಏಕೆಂದರೆ ಸನ್ಯಾಸಿಗಳು ಸಾಮಾಜಿಕ ಕಾದಂಬರಿ ರಚಿಸುವುದು ಎಂದರೇನು ? ಹೀಗಾಗಿ ತುಂಬಾ ಟೀಕೆಗಳು ಬರಬಹುದು ಎಂಬ ಆತಂಕದಿಂದ ಸುಮಾರು ಎರಡು ವರ್ಷಕಾಲ ಬಹಿರಂಗ ಪಡಿಸಿರಲಿಲ್ಲ. ನಂತರ ಧೈರ್ಯ ಮಾಡಿ ಪ್ರಕಟಿಸಿದೆ. ಅದಕ್ಕೆ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿತು. ಜನರಿಂದ ಅಪೂರ್ವ ಪ್ರತಿಕ್ರಿಯೆ ವ್ಯಕ್ತವಾಯ್ತು. ಹೀಗಾಗಿ ಎರಡನೆಯ ಕಾದಂಬರಿ ತರಂಗಿಣಿ ಬರೆಯಲು ಇದ್ದ ಮಾನಸಿಕ ತಡೆಯು ನಿವಾರಣೆಯಾಗಿತ್ತು. ಜೊತೆಗೆ ಅಧ್ಯಾತ್ಮಿಕ ಆಯಾಮದ ಕಾದಂಬರಿಯಾಗಿದ್ದುದು ಇನ್ನಷ್ಟು ಧೈರ್ಯವನ್ನು ಕೊಟ್ಟಿತು.

ಲೋಕದ ಕಣ್ಣಿಗೆ ಸರಿಯಲ್ಲದ ನಿಲುವು ತಳೆದು ತನ್ನ ಅಂತಃಸಾಕ್ಷಿ ಹೇಳಿದಂತೆ ದೃಢತೆಯಿಂದ ಹೆಜ್ಜೆ ಇಟ್ಟ ಹೆಣ್ಣು ಮಹಾದೇವಿ. ಒಂದೊಂದು ಹೆಜ್ಜೆ ಇಡುವ ಸ್ಥಳದಲ್ಲೂ ಕಲ್ಲು ಮುಳ್ಳುಗಳೇ...! ಆದರೆ ಅವು ತಂತಾವೇ ಬೆಚ್ಚಿ ಹಿಂಸರೆಯುವಂತೆ ಮಾಡಿದ್ದು ಆಕೆಯ ಧೀಃಶಕ್ತಿ, ಖಚಿತ ನಿರ್ಧಾರ. ಎಲ್ಲಾ ಹೆಣ್ಣುಗಳ ಆದರ್ಶ, ಮಾದರಿಯಾದಾಕೆ ಆರಿಸಿಕೊಂಡದ್ದು 'ಬಂಧಮುಕ್ತ ಭಾವಯುಕ್ತ' ಸಂಸಾರ. ತನ್ನ ಧೈರ್ಯ, ತಾಳ್ಮೆ, ಜ್ಞಾನ ಹಾಗೂ ವಿವೇಚನೆಗೆ ಪಡೆದ ಪದವಿ 'ಅಕ್ಕ' ಎಂದು.

ತರಂಗಿಣಿ ಅಂದರೆ ನದಿ. ಈ ಜೀವನವು ಒಂದು ಹರಿಯುವ ನದಿಯಂತೆ. ನದಿಗೆ ಒಂದು ಗುರಿಯಿದೆ. ಆ ಗುರಿಯೆಂದರೆ ತನ್ನ ಮೂಲ ನೆಲೆಯನ್ನು ಸೇರುವುದು. ನದಿಯ ಮೂಲವೆಂದರೆ ಸಮುದ್ರ. ಶರಧಿಯ ನೀರು ಆವಿಯಾಗಿ ಮೇಲೇರುವುದು. ಹನಿಯಾಗಿ ಬೀಳುವುದು. ಹನಿ ಹನಿ ಸೇರಿ ಝರಿಯಾಗಿ, ತೊರೆಯಾಗಿ, ನದಿಯಾಗಿ ಸಮುದ್ರ-ತನ್ನ ಮೂಲ ನೆಲೆಯೆಡೆಗೆ ಧಾವಿಸುತ್ತದೆ. ದಾರಿಯಲ್ಲಿ ಬೆಟ್ಟ ಇದಿರಾದರೆ ಬಳಸಿ ಹರಿಯುತ್ತದೆ. ಪ್ರಸಂಗ ಬಂದರೆ ಸೀಳುತ್ತದೆ. ತಗ್ಗು ಬಂದಾಗ ಜಲಪಾತವಾಗಿ ಧುಮ್ಮಿಕ್ಕುತ್ತದೆ. ಒಟ್ಟು ಅಡೆತಡೆಗೆ ಹೆದರದೆ ಗುರಿಯ ಕಡೆಗೆ ಓಡುತ್ತದೆ. ಹೀಗಾಗಿ ಜೀವನವನ್ನು ನದಿಗೆ ಹೋಲಿಸುವುದು ನನಗೆ ಪ್ರಿಯವಾದ ಸಂಗತಿ. ಇಂಥ ಒಂದು ಹೋಲಿಕೆಯನ್ನು ಸಾರ್ಥಕವಾಗಿ ಬಳಸಿಕೊಳ್ಳಲು ನಾನು ಆಯ್ಕೆ ಮಾಡಿಕೊಂಡ ಕಥಾವಸ್ತು ವೀರವಿರಾಗಿಣಿ ಅಕ್ಕಮಹಾದೇವಿಯ ಜೀವನ. ಅಕ್ಕಮಹಾದೇವಿ ಗುರಿ ಮುಟ್ಟಿದ ಜೀವನದಿ. ಮಾರ್ಗ ಮಧ್ಯದಲ್ಲೇ ಬತ್ತಿಹೋದ ಮಳೆಗಾಲದ ನದಿಯಂತಲ್ಲ. ಇಟ್ಟ ಹೆಜ್ಜೆಯನ್ನು ಹಿಂತೆಗೆಯದ ದಿಟ್ಟನಿಲುವಿನ ಮಹಿಳೆ.

ಆ ಮೊದಲು ಅಕ್ಕಮಹಾದೇವಿಯನ್ನು ಕುರಿತ ಎರಡು ಕಾದಂಬರಿ 'ಗಿರಿಯ ನವಿಲು' ಮತ್ತು 'ಕದಳಿಯ ಕರ್ಪೂರ' ಹೊರಬಂದಿದ್ದವು. ಆದರೆ ಅವು ನನಗೆ ಸಮಾಧಾನವನ್ನು ತಂದಿರಲಿಲ್ಲ. ಅಕ್ಕಮಹಾದೇವಿಯ ಔನ್ನತ್ಯವನ್ನು ಆ ಕಾದಂಬರಿಗಳು ಸಮರ್ಪಕವಾಗಿ ಚಿತ್ರಿಸಿಲ್ಲ ಎಂಬ ಕೊರಗು ಕಾಡುತ್ತಿತ್ತು. ಅಕ್ಕಮಹಾದೇವಿ ನನಗೆ ಮೊದಲಿನಿಂದಲೂ ಒಂದು ಮಾದರಿಯಾಗಿ, ಆದರ್ಶವಾಗಿ ಮಾತ್ರವಲ್ಲ ಧ್ಯೇಯವಾಗಿ ತೋರುತ್ತಿದ್ದಳು.

ಮಹಿಳೆ ಒಂದು ಸೀಮಿತ ಜಗತ್ತಿಗೆ ದೂಡಲ್ಪಟ್ಟು ಕೇವಲ ಪುರುಷನ ದಾಸಿಯಾಗಿ, ಭೋಗದ ಸಾಧನವಾಗಿ, ಹೆರುವ ಯಂತ್ರವಾಗಿ, ದುಡಿಯುವ ಆಳಾಗಿ ಬಸವಳಿದಿದ್ದಾಗ.... ಸ್ತ್ರೀಗೆ ಮದುವೆಯ ಹೊರತು ಅನ್ಯ ಮಾರ್ಗವಿಲ್ಲ ಎಂಬ ನಂಬಿಕೆ ರೂಢಿಗೊಂಡಿದ್ದಾಗ ಇದೆಲ್ಲವನ್ನೂ ನಿರಾಕರಿಸಿ ಒಂದು ಅರ್ಥದಲ್ಲಿ ಪ್ರತಿಭಟಿಸಿ ಸಂಪ್ರದಾಯವು ಹೇರಿದ್ದ ಸಂಕೋಲೆಯನ್ನು ಕಳಚಿ ನಿಂತ ಧೀಮಂತಳು ಅಕ್ಕಮಹಾದೇವಿ. "ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂಬ ಶರಣವಾಣಿಯನ್ನು ಸಾಕಾರಗೊಳಿಸಿದವಳು ಅಕ್ಕಮಹಾದೇವಿ. ಕನ್ನಡ ಸಾಹಿತ್ಯ ಬನದಲ್ಲಿ ಕವಿ ಕೋಗಿಲೆಯಾಗಿ ಹಾಡಿ, ಅಧ್ಯಾತ್ಮಿಕ ಸರೋವರದಲ್ಲಿ ಪರಮ ಹಂಸೆಯಾಗಿ ವಿಹರಿಸಿ, ಪಾರಮಾರ್ಥಿಕ ಗಿರಿಯಲ್ಲಿ ನವಿಲಾಗಿ ನರ್ತಿಸಿದ ದಾರ್ಶನಿಕ ದೇವಗಂಗೆ ಅಕ್ಕಮಹಾದೇವಿ.

ಅಕ್ಕಮಹಾದೇವಿಯನ್ನು ಕುರಿತಾದ ಕಾದಂಬರಿಗೆ ತರಂಗಿಣಿ ಎಂಬ ಹೆಸರನ್ನು ಆಯ್ದುಕೊಂಡುದಲ್ಲದೆ ಇಡೀ ಜೀವನವನ್ನು ಐದು ಭಾಗಗಳನ್ನಾಗಿ ಕೃತಿಯಲ್ಲಿ ಮೂಡಿಸುವ ಪ್ರಯತ್ನ

ಮಾಡಲಾಗಿದೆ. ಉಗಮ, ಪ್ರಗತಿ, ಗಮನ, ಸಂಗಮ, ಸಮಾಗಮ ಎಂದು ನದಿಯ ನಡಿಗೆಗೆ ಅನುಸಾರವಾಗಿ ವಿಂಗಡಿಸಿದೆ. ಇದು ಒಂದು ಅಧ್ಯಾತ್ಮಿಕ ಆಯಾಮವುಳ್ಳದ್ದು ಮಾತ್ರವಲ್ಲ. ಐತಿಹಾಸಿಕ ಕಾದಂಬರಿಯೂ ಆಗಿರುವುದರಿಂದ ಸ್ಥಳ ಸಂದರ್ಶನವೂ ಅನಿವಾರ್ಯವಾಗಿತ್ತು. ಅಕ್ಕ ಹುಟ್ಟಿ ಬೆಳೆದ ಮಲೆನಾಡಿನ ಉಡುತಡಿ, ಅನುಭವ ಮಂಟಪವಿದ್ದ ಬಸವಕಲ್ಯಾಣ ಕಡೆಯಲ್ಲಿ ಐಕ್ಯಳಾದ ಕದಳಿಯ ಬನ- ಈ ಎಲ್ಲವನ್ನೂ ನೋಡಿ ಬಂದೆವು. ದುರ್ಗಮ ಅರಣ್ಯ ಪ್ರದೇಶದಲ್ಲಿರುವ ಕದಳಿಯ ಯಾತ್ರೆ ರೋಮಾಂಚನಕಾರಿಯಾದುದು. ಎತ್ತರವಾದ ಬೆಟ್ಟಗಳ ನಡುವೆ ಹುದುಗಿಕೊಂಡಿವೆ. ಅಕ್ಕಮಹಾದೇವಿ ತಪಸ್ಸು ಮಾಡಿದ ಒಂದು ಗವಿ ಮತ್ತು ಕಾಲ್ನಡಿಗೆಯಲ್ಲಿಯೇ ಹತ್ತಿ ಇಳಿಯಬೇಕಾದ ಕಠಿಣ ಪರಿಶ್ರಮದ ಹಾದಿಯದು. ಸ್ಥಳ ಸಂದರ್ಶನ ಮಾಡಿ ಬಂದ ಮೇಲೆ ನನ್ನ ಲೆಕ್ಕಣಿಕೆ ನಿರರ್ಗಳವಾಗಿ ಹರಿಯತೊಡಗಿತು.

ತರಂಗಿಣಿ ಕಾದಂಬರಿಯಲ್ಲಿ ಅಕ್ಕಮಹಾದೇವಿಯ ಜೀವನ ದರ್ಶನದ ಜೊತೆಗೆ ಮಾನವ ಜೀವನದ ದರ್ಶನದ ಒರತೆಯನ್ನೂ ಕಾಣಬಹುದು. ಒಬ್ಬ ವ್ಯಕ್ತಿ ಅಸಹಜವಾದ, ಅಸಾಮಾನ್ಯವಾದ ದಾರಿ ತುಳಿದಾಗ ಜೀರ್ಣಿಸಿಕೊಳ್ಳಲಾಗದ ಮನಸ್ಸುಗಳು ಆಡಿಕೊಳ್ಳುವ ಮಾತು, ತೋರುವ ಪ್ರತಿಕ್ರಿಯೆ ವಿಲಕ್ಷಣ. ಆದರೆ ಅಕ್ಕ ಅದಕ್ಕೆ ಬೆದರಲಿಲ್ಲ ಬೆಚ್ಚಲಿಲ್ಲ.

ಹೆದರದಿರು ಮನವೆ, ಬೆದರದಿರು ತನುವೆ
ನಿಜವನರಿದು ನಿಶ್ಚಿಂತವಾಗಿರೆಲೆ ಮನವೆ
ಫಲವಾದ ಮರನ ಇಡುವರೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ
ಭಕ್ತಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ, ಚನ್ನಮಲ್ಲಿಕಾರ್ಜುನಾ.
ನಿಮ್ಮ ಶರಣರ ನುಡಿಯೆ ಗತಿಮತಿ ಸೋಪಾನ.

ಧ್ಯೇಯವಾದಿಯನ್ನು ಅರ್ಥ ಮಾಡಿಕೊಳ್ಳದೆ ನಿಂದಿಸುವವರು ಬಹಳ. ಪ್ರವಾಹ ಪತಿತರಾಗಿ ಸಾಗುವವರ ತಂಟೆಗೆ ಯಾರೂ ಬರುವುದಿಲ್ಲ. ಪ್ರವಾಹದ ವಿರುದ್ಧ ಸಾಗುವರನ್ನು ಅರ್ಥ ಮಾಡಿಕೊಳ್ಳದ ಸಮಾಜ ತೀವ್ರವಾದ ಪ್ರತಿಕ್ರಿಯೆ ತೋರುವುದು. ಅದನ್ನು ಅಕ್ಕ 'ಫಲವಾದ ಮರನ ಇಡುವರೊಂದು ಕೋಟಿ ಎಲವದ ಮರನ ಇಡುವರೊಬ್ಬರ ಕಾಣೆ' ಎಂದು ಹೇಳುವ ಮೂಲಕ ಅಭಿವ್ಯಕ್ತಿಸಿದ್ದಾಳೆ. ಹೀಗಾಗಿ ನಮ್ಮ ಮಾರ್ಗದರ್ಶನಕ್ಕೆ ಇರಿಸಿಕೊಳ್ಳಬೇಕಾದ್ದು ವಿಚಾರಶೀಲರಾದ ಶರಣರ ಮಾತುಗಳನ್ನೇ ವಿನಾ ಅಜ್ಞಾನಿಗಳಾದ ಲೌಕಿಕರ ಮಾತುಗಳನ್ನಲ್ಲ ಎಂದು ಬೋಧಿಸಿದ್ದಾಳೆ.

ಧ್ಯೇಯವಾದಿಯ ಬದುಕಿನಲ್ಲಿ ಹಲವಾರು ಪ್ರಲೋಭನೆಗಳು, ಆಮಿಷಗಳು ಎದುರಾಗುವುದುಂಟು. ಅಕ್ಕನ ಜೀವನದಲ್ಲಿ ಬಂದ ಅಂಥ ಪ್ರಲೋಭನೆ ಕೌಶಿಕ ಮಹಾರಾಜ. ಅಪೂರ್ವ ಸುಂದರಿಯಾದ ಅಕ್ಕಮಹಾದೇವಿಯನ್ನು ವಿವಾಹವಾಗಿ ಪಟ್ಟದರಸಿಯ ಪಟ್ಟವನ್ನು ಕೊಡುವೆನೆಂದು ಆಮಿಷ ತೋರಿದ. ಆದರೆ ಅಕ್ಕ ಆಮಿಷಕ್ಕೆ ಒಳಗಾಗಲಿಲ್ಲ. ಪಟ್ಟದರಾಣಿಯ ವೈಭವವಾಗಲೀ ಅರಮನೆಯ ಸಿರಿಸಂಪತ್ತಾಗಲೀ ಅಕ್ಕನನ್ನು ವಿಚಲಿತಗೊಳಿಸಲಿಲ್ಲ. ಆಕೆಯ ಲಕ್ಷ್ಯವೆಲ್ಲ ಚನ್ನಮಲ್ಲಿಕಾರ್ಜುನನ ಕಡೆಗೆ, ಅರ್ಥಾತ್ ದೇವನೆಂಬ ಧ್ಯೇಯದ ಕಡೆಗೆ.

ಸಾಮಾನ್ಯ ಲೌಕಿಕರು ಮತ್ತು ದುರ್ಜನರು ಮಾಡುವ ಟೀಕೆ-ಟಿಪ್ಪಣಿ ಅತ್ತಲಿರಲಿ. ಧಾರ್ಮಿಕರೆಂಬ ಸೋಗು ಹಾಕಿಕೊಂಡು ಬರುವ ಬರುವ ಕೆಲವು ಸಾಧು ಸನ್ಯಾಸಿಗಳು ಮಾಡುವ ವರ್ತನೆ ಅಕ್ಕಮಹಾದೇವಿಗೆ ದಿಗ್ಭ್ರಾಂತಿ ಹುಟ್ಟಿಸಿದಂತೆ ನಮಗೂ ಹುಟ್ಟಿಸುವುದು. ಲೋಕದ ಕಣ್ಣಿಗೆ ಧಾರ್ಮಿಕತೆಯ ಸೋಗು, ಆಂತರಿಕವಾಗಿ ಭಯಂಕರ ರೂಪ. ಇಂಥ ಜನರೂ ಧಾರ್ಮಿಕ ಜಗತ್ತಿನಲ್ಲಿ ಕಾಣಬರುವರು. ಜೀವನದಲ್ಲಿ ತಾಳ್ಮೆ, ಸಹನೆ ಬಹಳ ಮುಖ್ಯ. ಅನುಭವ ಮಂಟಪಕ್ಕೆ ಅಕ್ಕ ಬಂದಾಗ ಶೂನ್ಯಪೀಠದಲ್ಲಿದ್ದ ಅಲ್ಲಮಪ್ರಭು ದೇವರು ಕಠೋರ ಪರೀಕ್ಷೆಗೆ ಈಡುಮಾಡಿದರು. ಪ್ರವೇಶವನ್ನು ನಿರಾಕರಿಸುವರೇನೋ ಎಂದು ಸಂಶಯ ಬರುವಂತೆ ಪ್ರಶ್ನೆಗಳನ್ನು ಕೇಳಿದರು. ಆದರೆ ಅಕ್ಕಮಹಾದೇವಿ ತಾಳ್ಮೆಗೆಡಲಿಲ್ಲ. ಅಂಜಲಿಲ್ಲ-ಅಳುಕಲಿಲ್ಲ: ನಿರ್ಭಯದಿಂದ ಉತ್ತರಿಸಿದಳು. ಕಡೆಗೆ ಶರಣರ ಮನಸ್ಸನ್ನು ಗೆದ್ದಳು. ಆವರೆಗೂ ಮಹಾದೇವಿಯಾಗಿದ್ದವಳು ಅಲ್ಲಮಪ್ರಭುವಿನಿಂದ 'ಅಕ್ಕ'ನೆಂಬ ಬಿರುದನ್ನು ಪಡೆದು 'ಅಕ್ಕಮಹಾದೇವಿ'ಯಾದಳು.

"ನಿನ್ನ ವ್ಯಕ್ತಿತ್ವವನ್ನು ಬೆಳಕಿಗೆ ತರಲೋಸುಗವಾಗಿಯೇ ಹೀಗೆ ಪರೀಕ್ಷಿಸಲಾಯಿತು: ತಪ್ಪು ತಿಳಿಯಬೇಡ ತಾಯಿ" ಎಂದು ಅಲ್ಲಮ ಪ್ರಭುದೇವರು ನುಡಿದಾಗ ಅಕ್ಕ ಹೇಳುವ ವಚನ ಎಂದೆಂದಿಗೂ ದಾರಿದೀಪ.

ಚಂದನವ ಕಡಿದು ಕೊರೆದು ತೇದೊಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದೊಡೆ
ಬೆಂದು ಕಳಂಕಹಿಡಿದಿತ್ತೆ?
ಸಂದುಸಂದು ಕಡಿದ ಕಬ್ಬನು
ತಂದು ಗಾಣದಲ್ಲಿಕ್ಕಿ ಅರೆದೊಡೆ
ಬೆಂದು ಪಾಕಗೊಳೆ ಸಕ್ಕರೆಯಾಗಿ
ನೊಂದೆನೆಂದು ಸಿಹಿಯ ಬಿಟ್ಟಿತ್ತೆ?

ಕೆಲವೊಮ್ಮೆ ಧ್ಯೇಯವಾದಿಗಳಿಗೆ ಕಠಿಣ ಪರೀಕ್ಷೆಗಳು ಎದುರಾಗುತ್ತವೆ. ಆಗ ಸಹನೆಯನ್ನಾಗಲೀ, ಧೈರ್ಯವನ್ನಾಗಲೀ ಕಳೆದುಕೊಳ್ಳದೆ ತಾಳ್ಮೆಯಿಂದ ನಿರೀಕ್ಷಿಸಬೇಕು: ಯಶಸ್ಸು ಒಂದೇ ದಿವಸಕ್ಕೆ ಸಿಗುವಂಥದ್ದಲ್ಲ ಎಂಬ ಸಂದೇಶವನ್ನು ಅಕ್ಕನ ಈ ವಚನ ಸಾರುತ್ತದೆ.

ನಿಶ್ಚಿತ ಗುರಿಯೆಡೆಗೆ ಸಾಗುವಾಗ ಕೆಲವು ಜನರು ಆಡುವ ನಿಂದೆಯ ಮಾತುಗಳು ವ್ಯಕ್ತಿಯನ್ನು ಖಿನ್ನನನ್ನಾಗಿ ಮಾಡುತ್ತವೆ. ಕೆಲವೊಮ್ಮೆ ನಿಂದೆಗಿಂತಲೂ ಸ್ತುತಿಯೇ ಅಪಾಯಕಾರಿಯಾಗಿ ಮೇಲರಿಮೆ ಬೆಳೆಯುವಂತೆ ಮಾಡುತ್ತದೆ. ವಿವೇಕಿಯಾದವನು ಸ್ತುತಿ ನಿಂದೆಗಳೆರಡನ್ನೂ ಸಮಾನವಾಗಿ ಸ್ವೀಕರಿಸಬೇಕು. ನಿಂದೆಗೆ ಕುಗ್ಗದೇ ಸ್ತುತಿಗೆ ಹಿಗ್ಗದೆ ತನ್ನ ವ್ಯಕ್ತಿತ್ವವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಆಗ ಮೇಲರಿಮೆಯ ಅಹಂಕಾರವಾಗಲೀ ಕೀಳರಿಮೆಯ ಖಿನ್ನತೆಯಾಗಲೀ ಉಂಟಾಗುವುದಿಲ್ಲ ಎನ್ನುವುದಕ್ಕೆ ಅಕ್ಕನ ದಿವ್ಯ ಸಂದೇಶ ಹೀಗೆ ಹೇಳುತ್ತದೆ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೆರೆ ತೆರೆಗಳಿಗಂಜಿದೊಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಂತಯ್ಯ ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ-ನಿಂದೆಗಳು ಬಂದರೆ
ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಹೀಗೆ ತರಂಗಿಣಿ ಕಾದಂಬರಿಯು ಅಕ್ಕಮಹಾದೇವಿಯ ಜೀವನ, ಸಾಧನೆ, ಸಂದೇಶಗಳ ಸಮ್ಯಕ್ ದರ್ಶನವನ್ನು ಮಾಡಿಸುತ್ತದೆ. ಅದನ್ನು ಓದಿ ಅನೇಕರು "ನಮಗೆ ಏನಾದರೂ ತೊಂದರೆ ಬಂದು ಮಾನಸಿಕ ಉದ್ವೇಗವಾದರೆ ಆಗ ತರಂಗಿಣಿಯ ಕೆಲವು ಪುಟಗಳನ್ನು ಓದಿದರೆ ನಮಗೆ ಸಮಾಧಾನ ಸಿಕ್ಕುತ್ತದೆ. ಮನಸ್ಸು ಶಾಂತವಾಗುತ್ತದೆ" ಎಂದು ಹೇಳಿದಾಗ ನನ್ನ ಮನಸ್ಸಿಗೆ ಅಪಾರ ತೃಪ್ತಿ ಎನಿಸುತ್ತದೆ. ನನ್ನ ಬರವಣಿಗೆ ಸಾರ್ಥಕವಾಯಿತು ಎಂಬ ಧನ್ಯತಾಭಾವ ಪಡಿಮೂಡುತ್ತದೆ.

ಅಕ್ಕಮಹಾದೇವಿ ಪರಿಚಯದೊಡನೆ ಶರಣ ಧರ್ಮದ ಸಾರವನ್ನೂ ಪರಿಚಯ ಮಾಡಿಕೊಡುವ ತರಂಗಿಣಿ ತನ್ನ ಜನಪ್ರಿಯತೆಯಿಂದ ಮರಾಠಿ, ಹಿಂದಿ ಮತ್ತು ತಮಿಳು ಭಾಷೆಗಳಿಗೂ ಭಾಷಾಂತರಗೊಂಡಿದೆ. ಅಷ್ಟೆ ಅಲ್ಲದೇ ಕನ್ನಡದ ಆವೃತ್ತಿಯ ಎಂಟನೆಯ ಮುದ್ರಣವನ್ನು ಕಂಡಿದೆ. ಹೀಗಾಗಿ ತರಂಗಿಣಿಯ ಜನನ ಅಕ್ಕಮಹಾದೇವಿಯ ಪ್ರೇರಣೆಯೊಡನೆ ಹುಟ್ಟಿ ಬಂದುದಾಗಿದೆ ಎಂದು ಅಧ್ಯಾತ್ಮಿಕವಾಗಿ ಹೇಳಬಹುದಲ್ಲದೇ ಅಕ್ಕಮಹಾದೇವಿಯ ಆತ್ಮಕಥೆಯಂತಿದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.*

– ಮಾತಾಜಿ. (ಸಿಹಿಗಾಳಿ [ಜನವರಿ 2012] ಮಾಸಪತ್ರಿಕೆಯ ಕೃಪೆಯಿಂದ)

ಉಳವಿಯ ಶಿವಪುರದಲ್ಲಿರುವ ಚನ್ನಬಸವಾಶ್ರಮದಲ್ಲಿ ತರಬೇತಿ ಶಿಬಿರ

ಬೈಲಹೊಂಗಲ, ಕಿತ್ತೂರು, ಬೆಳಗಾವಿಯ ಶರಣ ಬಂಧುಗಳು ಮುಖ್ಯವಾಗಿ ಯುವಕರು ಉಳವಿಯ ದುರ್ಗಮ ಅರಣ್ಯ ಗರ್ಭದಲ್ಲಿರುವ ಮಹಾಮನೆ ಗವಿಯನ್ನು ಸ್ವಚ್ಛ ಮಾಡುವ ಕಾರ್ಯಕ್ರಮ ಹಾಕಿಕೊಂಡು ಪ್ರತಿವರ್ಷವೂ ಹೋಗಿಬರುತ್ತಿದ್ದಾರೆ. ಮುಂಭಾಗದಿಂದ ಆರಂಭಿಸಿ ಪ್ರತಿವರ್ಷವೂ ಅಷ್ಟಷ್ಟು ಸ್ವಚ್ಛ ಮಾಡುತ್ತಿದ್ದಾರೆ. ಅವರ ಈ ಅಭಿನಂದನಾರ್ಹ ಸೇವೆಯನ್ನು ಮೆಚ್ಚಿಕೊಳ್ಳಬೇಕು.

2012ರ ಮೇ 2 ರಿಂದ 8ರವರೆಗೆ ಈ ವರ್ಷವೂ ಈ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದು ಇದಕ್ಕೆ ಹೆಚ್ಚಿನ ಜನರ ಕರಸೇವೆಯನ್ನು ಬಯಸಿದ್ದಾರೆ. ಉಳವಿಯ ಸಮೀಪ ದಟ್ಟ ಅರಣ್ಯದಲ್ಲಿ ಶಿವಪುರ ಎಂಬ ಊರು ಇದ್ದು ಅಲ್ಲಿ ಪೂಜ್ಯ ಚನ್ನಬಸವಾನಂದರು ಪ್ರಶಾಂತವಾದ ಸುಂದರ ಆಶ್ರಮವನ್ನು ಕಟ್ಟಿದ್ದಾರೆ. ಬಹಳ ಪರಿಶ್ರಮದಿಂದ 150 ರಿಂದ 200 ಜನ ತಂಗಲು ಆಶ್ರಯ ಮಾಡಿದ್ದಾರೆ. ಹೀಗಾಗಿ ದುರ್ಗಮ ಸ್ಥಳದಲ್ಲಿರುವ ಮಹಾಮನೆ ಗವಿಯ ಸಂದರ್ಶನಕ್ಕೆ ಹೋಗುವವರು ಶಿವಪುರದ ಶರಣ. ಗೋಪಾಲಭಟ್ಟರ ಮನೆಯಲ್ಲಿ ತಂಗುವರು. ಹೆಚ್ಚುಕಾಲ ತಂಗುವುದಿದ್ದರೆ ಪೂಜ್ಯ ಚನ್ನಬಸವಾನಂದರ ಆಶ್ರಮದಲ್ಲಿ ತಂಗುವರು.

ಸುಪ್ರಭಾತದಲ್ಲಿ ಸ್ನಾನ-ಇಷ್ಟಲಿಂಗಾರ್ಚನೆ ಮುಗಿಸಿ ಉಪಾಹಾರ ಕಟ್ಟಿಕೊಂಡು ಮಹಾಮನೆ ಗವಿಗೆ ಹೋಗಿ ಉಪಾಹಾರ ಸೇವಿಸಿ ಕರಸೇವೆ ಆರಂಭಿಸುವುದು. ಮಧ್ಯಾಹ್ನ ಅಲ್ಪ ವಿರಾಮದಲ್ಲಿ ಊಟ. ಪುನಃ ಕಾಯ(ಕ) ಸೇವೆ. ಸಂಜೆ ತನಕ ಮಾಡಿ ಪುನಃ ಆಶ್ರಮಕ್ಕೆ ಬಂದು ಪ್ರಾರ್ಥನೆ. ಪ್ರವಚನದ ನಂತರ ಪ್ರಸಾದ ಸ್ವೀಕರಿಸುವುದು. ಈ ಮಹತ್ವಪೂರ್ಣ ಸೇವೆಗೆ ಹೆಚ್ಚಿನ ಜನ ಸಿದ್ಧರಾಗಿರಿ.

1. ಮೇ 2ರಿಂದ 8 ರವರೆಗೆ ಶಿಬಿರ. ಮೇ 2ರಂದು ನಾನು ಬಂದು ಆಶ್ರಮದಲ್ಲಿ ಶಿಬಿರವನ್ನು ಉದ್ಘಾಟಿಸುತ್ತಿದ್ದೇನೆ.
2. ಸೇವಾ ಪ್ರಧಾನವಾದ ಈ ಶಿಬಿರಕ್ಕೆ ಸಣ್ಣಮಕ್ಕಳು, ಮುದುಕರು ಬಂದು ತೊಂದರೆ ಕೊಡಬಾರದು.
3. ಸಶಕ್ತರಾಗಿ ಸೇವೆ ಮಾಡಬಲ್ಲವರು ಮಾತ್ರ ಬರಬೇಕು. ದಿನಾಲು ಕಾಲ್ನಡಿಗೆಯಲ್ಲಿ ಮಹಾಮನೆ ಗವಿಗೆ ಹೋಗಿ ಬರಬೇಕು.
4. ತಾಯಂದಿರು ಮಧ್ಯ ವಯಸ್ಕರಿದ್ದರೂ ಪರವಾಗಿಲ್ಲ. ಏಕೆಂದರೆ ಶಿಬಿರಾರ್ಥಿಗಳಿಗೆ ಒಬ್ಬೊಬ್ಬರಿಗೆ 4 ರಿಂದ 6 ರೊಟ್ಟಿ ಒಂದು ದಿನಕ್ಕೆ ಬೇಕಾಗುವುದರಿಂದ ರೊಟ್ಟಿ ತಟ್ಟುವ ಸೇವೆ ಅವರಿಗೆ ಲಭ್ಯವಿದೆ. ಇದು ಸಹ ಕರಸೇವೆಯೆ. ದುಡಿದು ದಣಿಯುವ ಸ್ವಯಂ ಸೇವಕರಿಗೆ ಪ್ರಸಾದ ಮಾಡಿಸುವುದು ಪರಮಪುಣ್ಯದ ಕೆಲಸ.
5. ಬರುವಾಗ ಹಾಸಿಕೊಳ್ಳಲು, ಹೊದ್ದುಕೊಳ್ಳಲು ಊಟದ ತಟ್ಟೆ-ಲೋಟ, ವೈಯಕ್ತಿಕ ಪೂಜಾ ಸಾಮಗ್ರಿ ತರಬೇಕು.
6. ಶಿಬಿರ ಶುಲ್ಕ 500(ಐದುನೂರು)ರೂ.ಗಳು. ಈ ಕಾರ್ಯಕ್ರಮ ಯೋಜಿಸಿರುವವರು ರಾಷ್ಟ್ರೀಯ ಬಸವ ದಳದ ಸಾಮಾನ್ಯ ಕಾರ್ಯಕರ್ತರು. ಸಾಮಾನ್ಯವಾಗಿ ನಾವು ಶಿಬಿರ ಇಟ್ಟಾಗ ಉಚಿತವಾಗಿ ಬರುವವರ ಸಂಖ್ಯೆಯೇ ಬಹಳ. ಈ ಶಿಬಿರದಲ್ಲಿ ಹಾಗೆ ಮಾಡಬಾರದು. ಸಂಯೋಜಕರ ಮತ್ತು ಆಶ್ರಮದ ನಿರ್ವಹಣಾ ವೆಚ್ಚವನ್ನಾದರೂ ಕೊಡಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರಾಗಿ ಶರಣ-ಶರಣೆಯರು ಭಾಗವಹಿಸಬೇಕೆಂದು ಕೋರುತ್ತೇವೆ. ಸಂಪರ್ಕಿಸುವ ದೂರವಾಣಿ : ಶರಣ ಗಂಗಾಧರ ಕಟ್ಟಿ, ಕಿತ್ತೂರು. ದೂ. 0 900886252, ಶರಣ. ಸುಧೀರ ವಾಲಿ, ಬೈಲಹೊಂಗಲ. ದೂ. 09945200343.

27-2-2012

ಶುಭ ಹಾರೈಕೆಗಳೊಡನೆ
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಶರಣ ಬಂಧುಗಳಲ್ಲಿ ವಿನಂತಿ

ಕಲ್ಯಾಣ ಕಿರಣ ತಲುಪದಿದ್ದಲ್ಲಿ ನಿಮ್ಮ ಚಂದಾ ಸಂಖ್ಯೆ, ಪೂರ್ಣ ವಿಳಾಸ, ಪಿನ್‌ಕೋಡ್, ದೂರವಾಣಿ ಸಂಖ್ಯೆ ಯಾವ ತಿಂಗಳು ತಲುಪಿಲ್ಲ ಸವಿವರವಾಗಿ ಈ ದೂರವಾಣಿ ಸಂಖ್ಯೆಗಳಿಗೆ 9738028585, 8892912123 SMS ಮುಖಾಂತರ ಕಳುಹಿಸಿರಿ. email-kalyanakirana1970@gmail.com

ವಿಶ್ವಗುರು ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ ಯೋಜನೆ

ದೇಣಿಗೆಯ ಬಗೆಗಳು

1. ಸ್ವಯಂ ಪ್ರೇರಣೆಯಿಂದ ಶಕ್ತ್ಯಾನುಸಾರ ಭಕ್ತಿಯಿಂದ ಎಷ್ಟು ಕೊಟ್ಟರೂ ಸ್ವೀಕರಿಸಲಾಗುವುದು.
2. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ದಾನಿಗಳ ಫಲಕದ ಮೇಲೆ ಬರೆಸಲಾಗುವುದು.
3. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
4. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಿ ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ (ಹಿಂದೆ, ಎಡ ಮತ್ತು ಬಲ ಪಕ್ಕ) ಬರುವ ಸ್ಥಳಗಳಲ್ಲಿ ಒಂದು ಕಡೆ ಹಾಕಿಸಲಾಗುವುದು.
5. ಒಂದು ಲಕ್ಷ ರೂ ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ ಬರುವ ಸ್ಥಳಗಳಲ್ಲಿ ಒಂದು ಕಡೆ ಮ್ಯೂಸಿಯಮ್‌ನಲ್ಲಿ ಒಳಗೆ ಹಾಕಿಸಲಾಗುವುದಲ್ಲದೆ ದಾನಿಗಳ ಒಂದು ಭಾವಚಿತ್ರವನ್ನು ಪ್ರದರ್ಶಿಸಲಾಗುವುದು.

ಗುರು ಬಸವಣ್ಣನವರ ಜೀವನ ಚರಿತ್ರೆ ಚಿತ್ರಣ

ಬಸವ ಪುತ್ಥಳಿಯ ಕೆಳಗಿನ ಪೀಠದ ಎರಡು ಅಂತಸ್ತುಗಳಲ್ಲಿ ಗುರು ಬಸವಣ್ಣನವರ ಸಮಗ್ರ ಜೀವನ ಚಿತ್ರಿಸುವ 3ಡಿ ಮೂರ್ತಿಗಳನ್ನು ಕೂರಿಸಲಾಗುತ್ತಿದೆ. 32 ಪ್ರಮುಖ ಘಟನೆಗಳನ್ನು ಆಯ್ದುಕೊಳ್ಳಲಾಗಿದೆ. ಇದಕ್ಕೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆ ಸಹ ಇರುತ್ತದೆ. ಒಂದೊಂದು ಘಟನೆ ಚಿತ್ರಿಸಲು 1,50,000 (ಒಂದೂವರೆ ಲಕ್ಷ) ರೂ.ಗಳ ಖರ್ಚು ಬರುತ್ತದೆ. ಕೊಟ್ಟ ದಾನಿಗಳ ಹೆಸರಿನ ನಾಮಫಲಕವನ್ನು ಆ ಘಟನೆಯ ಚಿತ್ರದ ಮುಂಬದಿಯಲ್ಲಿ ದಾನಿಗಳ ಭಾವಚಿತ್ರ ಸಹಿತವಾಗಿ ಪ್ರದರ್ಶಿಸಲಾಗುವುದು.

108 ಮೆಟ್ಟಿಲು ಯೋಜನೆ

ನೆಲ ಮಟ್ಟದಿಂದ ಬಸವ ಮೂರ್ತಿಯ ಪೀಠದವರೆಗೆ 108 ಮೆಟ್ಟಿಲು, ಇಳಿಯಲು 108 ಮೆಟ್ಟಿಲು ಮಾಡಲಾಗುತ್ತಿದೆ. ಇವಕ್ಕೆ ಗ್ರಾನೈಟ್ ಹಾಕಿಸಲಾಗುವುದು. ಒಂದೊಂದು ಮೆಟ್ಟಿಲಿನ ಸಂಪೂರ್ಣ ವೆಚ್ಚ 15,000 (ಹದಿನೈದು ಸಾವಿರ) ಬರುತ್ತಿದೆ. ಕೊಟ್ಟ ದಾನಿಗಳ ಹೆಸರನ್ನು ಮೆಟ್ಟಿಲಿನ ಕಲ್ಲಿನ ಮೇಲೆ ಕೆತ್ತಿಸಲಾಗುವುದು.

ವಿಶೇಷ ಸೂಚನೆ

ಈ ಯೋಜನಾ ಪತ್ರ ನೋಡಿದ ನೀವೂ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ಕೊಡಲು, ನಿಮ್ಮ ಬಂಧು-ಮಿತ್ರರಿಂದ ಕೊಡಿಸಲು ಆಸಕ್ತಿವಹಿಸಬೇಕಾಗಿ ವಿನಂತಿಸುತ್ತೇವೆ. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ ಪಡೆದಿದ್ದು ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು. ಈ ಸೌಲಭ್ಯವು ನವೀಕರಣಗೊಂಡು ಚಾಲ್ತಿಯಲ್ಲಿದೆ ಎಂಬುದನ್ನು ದಾನಿಗಳ ಗಮನಕ್ಕೆ ತರಲು ಬಯಸುತ್ತೇವೆ.

ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೇ ಮುಖ್ಯ ರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು-560010
ದೂರವಾಣಿ : -080-23131476

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ
ಬಸವ ಮಹಾಮನೆ. ಮುಖ್ಯ ರಸ್ತೆ
ಬಸವ ಕಲ್ಯಾಣ, ಜಿಲ್ಲೆ: ಬೀದರ್
ದೂರವಾಣಿ : 9448732456, 9480497346

ಭಾಗ -40 - ಮಾತಾಜಿ

ಬಸವ ವಚನಾಮೃತ

776. ಲಿಂಗಪ್ರಸಾದ ಬಹು ಮುಖ್ಯ

ಲಿಂಗಪ್ರಸಾದಿಗಳಲ್ಲದವರ ಸಂಗ
ಭಂಗವೆಂದುದು ಗುರುವಚನ.
ಲಿಂಗಪ್ರಸಾದಿಗಳಲ್ಲದವರ ಸಂಗ
ಪಂಚಮಹಾಪಾತಕವೆಂದುದು ಲಿಂಗವಚನ.
ಲಿಂಗದೇವಾ, ನಿಮ್ಮ ಶರಣರಿಗೆ
ಶರಣೆಂದು ಶುದ್ಧನಯ್ಯಾ. –ಬವದೀ. 777

ದಿನ ನಿತ್ಯ ಇಷ್ಟಲಿಂಗಾರ್ಚನೆಯನ್ನು ಮಾಡಿ ತೀರ್ಥ–ಪ್ರಸಾದಗಳನ್ನು ಸ್ವೀಕರಿಸುವುದು ಲಿಂಗಾಯತನ ನೇಮ. ಪ್ರತಿಯೊಬ್ಬರೂ ಹೀಗೆ ಮಾಡಬೇಕು. ಆ ರೀತಿ ಮಾಡದಿದ್ದವರ ಜೊತೆ ಯಾವುದೇ ವ್ಯವಹಾರ ಇಟ್ಟುಕೊಳ್ಳಬಾರದು ಎಂಬ ನೇಮವನ್ನು ದೀಕ್ಷೆ ಕೊಡುವಾಗ ಗುರುಗಳು ವಿಧಿಸುತ್ತಾರೆ. ಲಿಂಗ ಪ್ರಸಾದವನ್ನು ಸ್ವೀಕರಿಸದೆ ಇರುವವನ ಒಡನಾಟ ಪಂಚಮಹಾಪಾತಕ ಎನ್ನುತ್ತದೆ ಲಿಂಗದೇವನ ವಾಣಿ. ಏಕೆಂದರೆ ಸೃಷ್ಟಿಕರ್ತನಾದ ಲಿಂಗದೇವನನ್ನು ಆರಾಧಿಸುವುದು ಪ್ರತಿಯೊಬ್ಬರ ಕರ್ತವ್ಯ. "ಲಿಂಗದೇವಾ, ಈ ರೀತಿ ಆಚರಿಸುವ ಶರಣರಿಗೆ ಶರಣೆಂದು ನಾನು ಶುದ್ಧನಾದೆನು." ಎನ್ನುತ್ತಾರೆ ಗುರು ಬಸವಣ್ಣನವರು.

777. ಕರ್ತ ಭೃತ್ಯ ಸಂಬಂಧ

ಸಯಿದಾನವ ತಂದು ನೀಡುವೆನಲ್ಲದೆ
ಸಂಬಂದಿ ನಾನಲ್ಲಯ್ಯಾ.
ಕರ್ತಂಗೆ ಭೃತ್ಯಾಚಾರವ ಮಾಡಿ
ಒಕ್ಕುದ ಕೊಂಡಿಪ್ಪೆನಯ್ಯಾ.
ಭೋಗಾದಿ ಭೋಗವ ಸಮವಾಗಿ ಭೋಗಿಸಲು
ಅಘೋರನರಕದಲ್ಲಿಕ್ಕುವ ಲಿಂಗದೇವ. –ಬವದೀ. 778

ಗುರು ಶಿಷ್ಯ ಸಂಬಂಧ, ಜಂಗಮ–ಭಕ್ತ ಸಂಬಂಧ, ಪತಿ–ಪತ್ನಿ ಸಂಬಂಧ ಇವುಗಳಲ್ಲಿ ಪರಸ್ಪರ ಎಷ್ಟೇ ವಿಶ್ವಾಸವಿದ್ದರೂ ವಿಶಿಷ್ಟ ದೂರವನ್ನು ಕಾಯ್ದುಕೊಳ್ಳಬೇಕು. ಗುರುಗಳು ಬಹಳ ವಾತ್ಸಲ್ಯಮಯಿ ಎಂದು ಅವರಿಗಿಂತ ಮೊದಲೇ ಶಿಷ್ಯನು ಊಟ ಮಾಡಿ ಕೂಡ್ರಬಾರದು. ಜಂಗಮ(ಯೋಗಿ)ರು ಬಹಳ ಶಾಂತ ಮೂರ್ತಿಗಳೆಂದು ಅವರಿಗಿಂತ ಮೊದಲೇ ಊಟದ ರುಚಿ ಅನುಭವಿಸಬಾರದು. ಪತ್ನಿಯು ಅನಿವಾರ್ಯ ಸನ್ನಿವೇಶದಲ್ಲಿ ಊಟ ಮಾಡಬಹುದೇ ವಿನಾ ದಿನ ನಿತ್ಯ ಅಲ್ಲ. ಸಣ್ಣ ಸಣ್ಣ ವರ್ತನೆಯಲ್ಲೂ ಭಕ್ತಿಯನ್ನು ಪ್ರೀತಿಯನ್ನು ತೋರಿಸಲು ಬರುತ್ತದೆ. ಪದಾರ್ಥಗಳನ್ನು (ಸಯದಾನವನ್ನು) ನೀಡುವುದಷ್ಟೆ ನನ್ನ ಕೆಲಸವೇ ವಿನಾ ಅದನ್ನು ಅನುಭವಿಸುವ ಹಕ್ಕು ಹೊಂದಿಲ್ಲ. ಒಡೆಯರ ಸೇವೆಯನ್ನು ಮಾಡಿ ನಂತರ ಅವರು ಅನುಗ್ರಹಿಸಿ ಕೊಟ್ಟ ಪ್ರಸಾದವನ್ನು ಸ್ವೀಕರಿಸುವುದಷ್ಟೆ ನನ್ನ ಕೆಲಸ. ಭೋಗಾದಿಭೋಗಗಳನ್ನು ಸಮವಾಗಿ ಭೋಗಿಸುವ ಆಕಾಂಕ್ಷೆ ತಾಳಬಾರದು. ಒಡೆಯರ ಸ್ಥಾನ ಅವರಿಗೇ ಮೀಸಲಿರಬೇಕು. ಅವರ ಹಾಸಿಗೆಯ ಮೇಲೆ ಮಲಗುವ ಚಪಲ, ಅವರ ಗದ್ದುಗೆಯ ಮೇಲೆ ಕೂಡ್ರುವ ಆಸೆ–ಹೀಗೆಲ್ಲ ಮಾಡಿದರೆ ನರಕವೇ ಪ್ರಾಪ್ತಿಯಾಗುವುದು.

778. ತ್ರಿವಿಧ ಪ್ರಸಾದ.

ಶುದ್ಧವ ಗುರುವಿಂಗೆ ಕೊಟ್ಟು, ಶುದ್ಧವಾಯಿತ್ತೆಂಬೆನಯ್ಯಾ,
ಸಿದ್ಧವ ಲಿಂಗಕ್ಕೆ ಕೊಟ್ಟು, ಸಿದ್ಧವಾಯಿತ್ತೆಂಬೆನಯ್ಯಾ,
ಪ್ರಸಿದ್ಧವ ಜಂಗಮಕ್ಕೆ ಕೊಟ್ಟು, ಪ್ರಸಿದ್ಧವಾಯಿತ್ತೆಂಬೆನಯ್ಯಾ.
ಗುರುಲಿಂಗಜಂಗಮವ ಏಕತ್ರಯವಾಗಿ ಕಾಣಲರಿಯದಿದ್ದಡೆ
ಶುದ್ಧ ಸಿದ್ಧ ಪ್ರಸಿದ್ಧ ಒಡನೆ ನಗುತ್ತೈದಾವೆ.
ತನುಮನಧನವ ನಿವೇದಿಸಲರಿಯೆನಾಗಿ
ಲಿಂಗದೇವ, ಒಲಿ ಎಂದಡೆಂತೊಲಿವ? –ಬವದೀ. 779

ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಪ್ರಸಾದಗಳಿಗೆ ಬೇರೆ ಬೇರೆ ಹೆಸರು ಕೊಡಲಾಗಿದೆ. ಗುರುಗಳಿಗೆ ನೀಡಿ, ಅವರಿಂದ ಅನುಗ್ರಹಿಸಲ್ಪಟ್ಟಿದ್ದು ಶುದ್ಧಪ್ರಸಾದ. ಪ್ರಸಾದಕ್ಕೆ ಕುಳಿತಾಗ ಲಿಂಗನೈವೇದ್ಯವ ಮಾಡಿ ಸ್ವೀಕರಿಸುವುದು ಸಿದ್ಧಪ್ರಸಾದ. ಜಂಗಮರನ್ನು ಮನೆಗೆ ಬರಮಾಡಿಕೊಂದು ಅವರಿಗೆ ನೀಡಿ ಅವರು ಅನುಗ್ರಹಿಸಿದ್ದನ್ನು ಪಡೆದು ಆಹ್ವಾನಿತ ಶರಣರಿಗೆ ಹಂಚಿ ತಾವೂ ಸ್ವೀಕರಿಸುವುದು ಪ್ರಸಿದ್ಧ ಪ್ರಸಾದ. ಗುರು–ಲಿಂಗ–ಜಂಗಮ ಇವು ಮೂರು ನಿರಾಕಾರ ಲಿಂಗದೇವನ ಸಾಕಾರ ರೂಪುಗಳು. ಅವುಗಳಲ್ಲಿ ಯಾವುದೇ ಭೇದವನ್ನು ಮಾಡದೆ ಗುರುಬಸವಣ್ಣನವರಿಗೆ ತನುವನ್ನು, ಲಿಂಗಕ್ಕೆ ಮನವನ್ನು, ಜಂಗಮಕ್ಕೆ ಧನವನ್ನು ನಿವೇದಿಸಬೇಕು. ಇಂಥ ಸಮರ್ಪಣೆ ಇಲ್ಲದೆ ದೇವರಿಗೆ ಒಲಿ ಎಂದರೆ ಹೇಗೆ ಒಲಿಯುವನು ?

779. ಒಕ್ಕ ಪ್ರಸಾದ

ಒಡಲ ಕಳವಳಕ್ಕೆ, ಬಾಯ ಸವಿಗೆ,
ಬಯಸಿ ಉಂಡೆನಾದಡೆ ನಿಮ್ಮ ತೊತ್ತಿನ ಮಗನಲ್ಲ.
ಬೇಡೆ, ಬೇಡೆ, ನಿಮ್ಮ ನಂಬಿದ ಸದ್ಭಕ್ತರ.
ಅವರೊಕ್ಕುದನುಂಬೆ ಅವರೆಂದಂತೆ ನಡೆವೆ.
ಎನ್ನೊಡೆಯ ಲಿಂಗದೇವನೊಲ್ಲದವರ ಹಿಡಿದೆನಾದಡೆ
ನಿಮ್ಮ ಪಾದದಾಣೆ. –ಬವದೀ. 780

ಸಾಮಾನ್ಯವಾಗಿ ಮನೆಯಲ್ಲಿ ಗುರು–ಜಂಗಮರಿಗಾಗಿ ಅಡಿಗೆ ಮಾಡಿ ಮೀಸಲಾಗಿ ಇಟ್ಟಿರುತ್ತಾರೆ. ಅವರು ಬಂದು ಉಣ್ಣುವವರೆಗೆ ಬೇರೆ ಯಾರಿಗೂ ಊಟ ಕೊಡುವುದಿಲ್ಲ. ಸೇವಕರಿಗೆ (ಮತ್ತು ಮಕ್ಕಳಿಗೆ) ತೀವ್ರ ಚಟಪಟಿಕೆ. ಒಂದು ಕಡೆ ಒಡಲ ಕಳವಳವಾದ ಹಸಿವೆ ಕಾಡುತ್ತಿದ್ದರೆ ನಾಲಿಗೆ ಬಯಸಿ ನೀರನ್ನು ಸುರಿಸುತ್ತಿರುತ್ತದೆ. ಅಡಿಗೆ ಮಾಡಿಟ್ಟ ಸೇವಕರುಗಳು ಗಬಕ್ಕನೆ ತಿಂದು ತೃಪ್ತಿಪಡುವ ಸಾಧ್ಯತೆ ಇರುತ್ತದೆ. ಇಲ್ಲವಾದರೆ ಮಾಲಿಕರನ್ನು ಕಾಡಿಬೇಡಿ ಪಡೆದುಕೊಳ್ಳುವ ಪ್ರಯತ್ನವು ನಡೆದಿರುತ್ತದೆ. ಲಿಂಗದೇವಾ, ನಿಮ್ಮ ನಂಬಿರುವ ಸದ್ಭಕ್ತರ ವಿಶ್ವಾಸಕ್ಕೆ ನಾನು ದ್ರೋಹ ಬಗೆಯುವುದಿಲ್ಲ. ಅವರು ಉಂಡು, ಕೊಟ್ಟಮೇಲೆ ನಾನು ಸ್ವೀಕರಿಸುವೆ. ಲಿಂಗದೇವನು ಯಾರಿಗೆ ಒಲಿಯುವನೊ ಅವರ ಒಡನಾಟದಲ್ಲಿ ಮಾತ್ರ ನಾನಿರುತ್ತೇನೆ.

780. ಲಿಂಗಾರ್ಪಿತ ಜೀವನ.

ಲಿಂಗಮುಖದಿಂದ ಬಂದ ಪ್ರಸಾದವಲ್ಲದೆ
ಕೊಂಡೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಲಿಂಗಾರ್ಪಿತವಲ್ಲದೆ ಉದಕವ ಮುಕ್ಕುಳಿಸಿದಡೆ
ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯಾ!
ಲಿಂಗಾರ್ಪಿತವಲ್ಲದೆ ಹುಲ್ಲುಕಡ್ಡಿಯ ಕೊಂಡಡೆ

ನಾ ಬಲ್ಲೆ, ಮುಂದೆ ಭವ ಘೋರ-ನರಕವೆಂಬುದ.
ನಿಮಗೆತ್ತಿದ ಕರದಲ್ಲಿ ಮತ್ತೊಂದಕ್ಕೆ ಕೈಯಾನೆನು.
ಆಳವರಿಯದೆ ನುಡಿದೆನು.
ಕಡೆ ಮುಟ್ಟ ಸಲಿಸದಿದ್ದಡೆ ತಲೆದಂಡ, ತಲೆದಂಡ! ಲಿಂಗದೇವಾ.
–ಬವದೀ. 781

ನಿಮ್ಮಾಣೆಯಾಗಿ, ನಿಮ್ಮ ಶರಣರ ಆಣೆಯಾಗಿ ಇಷ್ಟಲಿಂಗಾರ್ಪಿತವಲ್ಲವಾದುದನ್ನು ಸ್ವೀಕರಿಸುವುದಿಲ್ಲ. ದಿನ ನಿತ್ಯ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ ಮಾಡಿ ಅದಕ್ಕೆ ಮೂರು ಬಾರಿ ತೀರ್ಥವನ್ನು ಎರೆದು ಕರುಣೋದಕವಾಗಿ ಸ್ವೀಕರಿಸಿ ನಂತರ ಉಳಿದ ಪ್ರಸಾದ ಸ್ವೀಕಾರ. ಲಿಂಗಾರ್ಪಿತವಿಲ್ಲದೆ ನೀರನ್ನು ಸಹ ಕುಡಿಯುವುದಿಲ್ಲ ಎಂದು ಒಂದು ಅರ್ಥ ಮಾಡಿದರೆ ಇನ್ನೊಂದು ಅರ್ಥ ಹೀಗೆ ಮಾಡಬಹುದು. ಸ್ನಾನ ಮಾಡುವಾಗ ಬಾಯನ್ನು ಮುಕ್ಕಳಿಸಬೇಕಾಗುತ್ತದೆ. ಆಗ ಮನಸ್ಸಿನಲ್ಲಿ ಓಂ ಲಿಂಗಾಯ ನಮಃ ಎಂದು ಹೇಳಕೊಳ್ಳಬೇಕು. ಅದೇ ರೀತಿ ಹಲ್ಲುಗಳನ್ನು ಹುಲ್ಲುಕಡ್ಡಿಯಿಂದ ಸ್ನಾನಕ್ಕೆ ಪೂರ್ವದಲ್ಲಿ ಉಜ್ಜುವಾಗ ಅದರ ರಸವನ್ನು ನುಂಗಬಾರದು ಮತ್ತು ಮನಸ್ಸಿನಲ್ಲಿ ಲಿಂಗಧ್ಯಾನವನ್ನು ಮಾಡುತ್ತಿರಬೇಕು. ಲಿಂಗಾರ್ಪಿತವಿಲ್ಲದೆ ಕೊಂಡರೆ ಮುಂದೆ ಭವಘೋರ ನರಕತಪ್ಪದು.

"ಇಷ್ಟಲಿಂಗಾರ್ಚನೆ ಮಾಡುವಾಗ ಕರವೆತ್ತಿ ಕುರಂಗಮುದ್ರೆಯಿಂದ ನಮಸ್ಕರಿಸುತ್ತೇನೆ. ನಿಮಗೆ ಎತ್ತಿದಂತೆ ಕರವನ್ನು ಇನ್ನಾವ ದೇವತೆಗೂ ಎತ್ತುವುದಿಲ್ಲ. ನನ್ನ ಮನಸ್ಸಿನ ಆಳವನ್ನು ತಿಳಿಯದೆ ಪ್ರತಿಜ್ಞೆ ಮಾಡಿಬಿಟ್ಟೆ. ಆದರೆ ಕಡೆಯವರೆಗೂ ಸಲ್ಲಿಸದೆ ಇದ್ದರೆ ನನ್ನ ತಲೆದಂಡ ಲಿಂಗದೇವಾ."

781. ಉಣ್ಣುವ ಬಗೆ.

ಮೌನದಲುಂಬುದು ಆಚಾರವಲ್ಲ.
ಲಿಂಗಾರ್ಪಿತವ ಮಾಡಿದ ಬಳಿಕ
ತುತ್ತಿಗೊಮ್ಮೆಮ್ಮೆ ಶಿವ ಶರಣೆನುತ್ತಿರಬೇಕು.
ಕರಣವೃತ್ತಿಗಳಡಗುವುವು,
ಲಿಂಗದೇವನ ನೆನೆವುತ್ತ ಉಂಡಡೆ. –ಬವದೀ. 782

ಊಟ ಮಾಡುವುದೂ ಒಂದು ದೈವೀಕಲೆ. ಅದರಿಂದಲೇ ವ್ಯಕ್ತಿ ಆರೋಗ್ಯ ಕಾಯ್ದುಕೊಳ್ಳುವನು ಮತ್ತು ಕೆಡಿಸಿಕೊಳ್ಳುವನು. ಆರೋಗ್ಯಯುಕ್ತ ವಸ್ತುಗಳನ್ನು ಉಣ್ಣುವುದು ಒಂದಾದರೆ ಹೇಗೆ ಉಣ್ಣಬೇಕು ಎಂಬುದು ಮಹತ್ವಪೂರ್ಣ. ಮೌನವಾಗಿ ಉಣ್ಣುವುದಾಗಲೀ, ಹರಟೆ ಹೊಡೆಯುತ್ತ ಉಣ್ಣುವುದಾಗಲಿ ಸರಿಯಾದುದಲ್ಲ. ಎಲ್ಲ ವಸ್ತುಗಳನ್ನು ತಟ್ಟೆಯಲ್ಲಿ ಎಡೆ ಮಾಡಿದ ನಂತರ ಇಷ್ಟಲಿಂಗಕ್ಕೆ ಅರ್ಪಿತವ ಮಾಡಬೇಕು. ನಂತರ ಪ್ರತಿಯೊಂದು ತುತ್ತನ್ನು ಜಗಿಯುವಾಗಲೂ 'ಶಿವಶರಣು', 'ಲಿಂಗಾರ್ಪಿತವಾಗಲಿ' ಎನ್ನುತ್ತಿರಬೇಕು. ಲಿಂಗದೇವನ ನೆನೆಯುತ್ತ ಉಂಡರೆ ಇಂದ್ರಿಯಗಳ ಚಂಚಲತೆ ಅಡಗುವುದು. ಅವು ಸಾತ್ವಿಕಗೊಳ್ಳುವುವು..

782. ಅರ್ಪಣೆಯಲ್ಲಿ ಶರಣಾಗತಿ.

ಕಾಯದ ಕರಣದ ಕೈಯಲು ಪದಾರ್ಥವ ಹಿಡಿವಲ್ಲಿ
ನಿಮಗೆ ಕೊಡುವ ಭರದ ಭೀತಿಯಿಂದಾನರಿಯದಿಪ್ಪೆನಾಗಿ,
ಎನ್ನ ನೀನರಿದು ಸಲಹುತ್ತಿಪ್ಪೆಯಯ್ಯಾ,
ಲಿಂಗದೇವಾ. –ಬವದೀ. 783

ಶರೀರದ ಇಂದ್ರಿಯಗಳ ಕೈಯಲ್ಲಿ ಪದಾರ್ಥವ ಹಿಡಿದು ನಿನಗೆ ಅರ್ಪಿತ ಮಾಡುವಾಗ ಎಲ್ಲಿ ಮೀಸಲು ಕೆಟ್ಟಿತೊ ? ಯಾವ ಇಂದ್ರಿಯ ಅದನ್ನು ಮುಟ್ಟಿ ಮೈಲಿಗೆ ಮಾಡಿತೋ ಎಂಬ ಭಯ

ಕಾಡುವುದರಿಂದ ಲಿಂಗದೇವಾ, ನನ್ನ ತಪ್ಪು ಒಪ್ಪುಗಳನ್ನು ನೀನೇ ನೇರ್ಪಡಿಸಿಕೊಂಡು ನನ್ನನ್ನು ಸಲಹುತ್ತಿರುವೆ. ಅದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

783. ದೇವರು ದಯಾಮಯ

ಆಳಿಕಾರನೆನಗೊಬ್ಬ ಮಗ ಹುಟ್ಟಿದನೆಂದು
ಆಳಿಕೆಯ ಕೆಡಿಸಲೀಸದೆ ನಡೆಸುವ ನಮ್ಮಯ್ಯ.
ಪಂಚಭೂತಕಾಯವ ಭವಿಯೆಂದೆನಿಸಲೀಯದೆ
ಪ್ರಸಾದಕಾಯವ ಮಾಡಿ ಸಲಹುವ ನಮ್ಮಯ್ಯ.
ಆಳಿ ಸವೆವಲ್ಲಿ ಅವಧಾನಿಯಾಗಿದ್ದಡೆ
ಆಳ್ದನು ನಮ್ಮ ಲಿಂಗದೇವ. –ಬವದೀ. 784

ಒಳ್ಳೆಯ ಆಡಳಿತಗಾರನಾದ ಒಬ್ಬ ಮಗ ಹುಟ್ಟಿದನೆಂದು ಅವನ ಆಡಳಿತಕ್ಕೆ ಕುಂದು ತರಲು ಬಿಡದಂತೆ ನಮ್ಮಯ್ಯನಾದ ದೇವನು ನಡೆಸುವನು. ಅವನ ಅಭಿಮಾನವೇ ತನ್ನದು ಎಂಬ ಭಾವನೆಯಿಂದ ಆಸಕ್ತಿ ವಹಿಸುವನು. ಹುಟ್ಟಿದಾಗ ಪಂಚಭೂತ ಕಾಯವಾಗಿರುತ್ತದೆ. ಇಂಥ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಮಾಡಿ ಪ್ರಸಾದಕಾಯವಾಗಿ ಪರಿವರ್ತಿಸುವನು. ಸಾಧಕನು ತನ್ನನ್ನು ತಾನು ಸೇವೆ ಮಾಡಿ ಸವೆಸಿಕೊಂಡರೆ, ಅರ್ಪಿಸುವಲ್ಲಿ ಬಹಳ ಜಾಗೃತನಾಗಿದ್ದರೆ ಲಿಂಗದೇವನು ಭಕ್ತನ ಮೇಲೆ ತಾನೇ ಆಳಿಕೆ ನಡೆಸುವನು. ಇಲ್ಲಿ ಸಾಧಕ ತುಂಬಾ ಪ್ರಯತ್ನ ಮಾಡುವುದಕ್ಕಿಂತಲೂ ಲಿಂಗದೇವನಿಗೆ ಶರಣಾಗತನಾದರೆ ಎಲ್ಲವನ್ನೂ ಅವನೇ ಪೂರೈಸುವನು ಎಂಬ ಭಾವವಿದೆ.

784. ಶಿವಾಚಾರ ಕಷ್ಟಸಾಧ್ಯದ ದಾರಿ.

ಶಿವಾಚಾರವೆಂಬುದೊಂದು ಬಾಳಬಾಯ ಧಾರೆ:
ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು,
ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು.
ಬಿಚ್ಚಿ ಬೇರಾದಡೆ ಮೆಚ್ಚ ನಮ್ಮ ಲಿಂಗದೇವ. –ಬವದೀ. 785

ಶಿವಾಚಾರ ಎಂದರೆ ಧಾರ್ಮಿಕ ಆಚಾರ ಎಂದು ಒಂದು ಅರ್ಥವಾದರೆ ಸಾಮಾಜಿಕ ಸಮಾನತೆ ಎಂದು ಇನ್ನೊಂದು ಅರ್ಥ. ಧಾರ್ಮಿಕ ಆಚರಣೆ ಬಹಳ ಕಷ್ಟಸಾಧ್ಯ. ಲಿಂಗದೇವ ಮೆಚ್ಚಬೇಕು. ಮನೆಗೆ ಬಂದ ಜಂಗಮರು ಮೆಚ್ಚಬೇಕು. ಪ್ರಸಾದ ತತ್ತ್ವ ಆಚರಣೆಯಲ್ಲಿ ಅಳವಡಬೇಕು. ಯಾವುದರಲ್ಲಿ ಚ್ಯುತಿ ಬಂದರೂ ಲಿಂಗದೇವನು ಒಲಿಯುವುದಿಲ್ಲ. ಶರಣನಾದವನು ದೇವರು ಮೆಚ್ಚುವಂತೆ ನಡೆಯಬೇಕು. ಜ್ಞಾನಿಗಳಾದ ಜಂಗಮರು ಒಪ್ಪುವಂತೆ ಬಾಳಬೇಕು. ಹೀಗಾಗಿ ಶಿವಾಚಾರ ಎಂಬುದು ಕತ್ತಿಯ ಮೊನೆಯ ಮೇಲೆ ನಡೆದಂತೆ ಬಹು ಕಷ್ಟಕರ.

785. ತ್ರಿವಿಧ ಪ್ರಸಾದದ ಮರ್ಮ

ತ್ರಿವಿಧಪ್ರಸಾದವೆಂದೆಂಬರು, ಅದೆಂತಹುದೋ?
ಶುದ್ಧಪ್ರಸಾದ ಗುರುವಿನದ್ದದು, ಸಿದ್ಧಪ್ರಸಾದ ಲಿಂಗದ್ದದು,
ಪ್ರಸಿದ್ಧಪ್ರಸಾದ ಜಂಗಮದ್ದದು.
ಇಂತೀ ತ್ರಿವಿಧ ಒಂದಾದವರ ತೋರಾ, ಲಿಂಗದೇವಾ. –ಬವದೀ. 786

ಗುರುವಿಗೆ ಅರ್ಪಿಸಿದ್ದು ಶುದ್ಧಪ್ರಸಾದ, ಲಿಂಗಕ್ಕೆ ಅರ್ಪಿಸಿದ್ದು ಸಿದ್ಧಪ್ರಸಾದ, ಜಂಗಮಕ್ಕೆ ಸಲ್ಲಿಸಿದ್ದು ಪ್ರಸಿದ್ಧ ಪ್ರಸಾದ. ನಾವು ತ್ರಿವಿಧ ಪ್ರಸಾದವನ್ನು ಸ್ವೀಕರಿಸುತ್ತೇವೆ ಎಂಬುದರಲ್ಲಿ ಅರ್ಥವಿಲ್ಲ. ಏಕೆಂದರ ಗುರು–ಲಿಂಗ–ಜಂಗಮರು ಪ್ರಸಾದವನ್ನು ಸ್ವೀಕರಿಸುತ್ತಾರೆ. ಆದ್ದರಿಂದ ತ್ರಿವಿಧ ಪ್ರಸಾದದ ಮರ್ಮ ಅರಿತವನೇ ನಿಜ ಶರಣ.

786. ಶರಣರು ಪರುಷ ಮೂರ್ತಿಗಳು.

ಆವಾವ ಭಾವದಲ್ಲಿ ಶಿವನ ನಂಬಿದ ಶರಣರು ಎಂತಿದ್ದಡೇನಯ್ಯಾ?
ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು ಎಂತಿದ್ದಡೇನಯ್ಯಾ?
ಸುಚರಿತ್ರರು ಎಂತಿದ್ದಡೇನಯ್ಯಾ?
ಅವಲೋಹವ ಕಳೆವ ಪರುಷ ಎಂತಿದ್ದಡೇನಯ್ಯಾ?
ಲಿಂಗದೇವನ ಶರಣರು
ರಸದ ವಾರುಧಿಗಳು ಎಂತಿದ್ದಡೇನಯ್ಯಾ? –ಬವದೀ. 787

ಭಕ್ತಿ, ಜ್ಞಾನ, ಕ್ರಿಯೆ, ವೈರಾಗ್ಯ ಇವು ಸಾಧಕರ ಲಕ್ಷಣಗಳು. ಒಬ್ಬರಲ್ಲಿ ಇವೆಲ್ಲವೂ ಇರಬಹುದು ಅಥವಾ ಒಂದೊಂದು ಅಧಿಕವಾಗಿ ಇರಬಹುದು. ಯಾವುದೇ ಗುಣವನ್ನು ಹೊಂದಿ ದೇವರನ್ನು ನಂಬಿದ ಶರಣರು ಯಾವ ರೀತಿ ಇದ್ದರೇನು? ಅವರು ಸುಚರಿತ್ರರು. ಕೆಲವರು ಲೀಲಾಮೂರ್ತಿಗಳಾಗಿರುವರು. ಅವಲೋಹದ ಗುಣವ ಕಳೆದು ಪರುಷವು ಕಬ್ಬಿಣವನ್ನು ಚಿನ್ನವನ್ನಾಗಿ ಮಾಡುವಂತೆ ಲಿಂಗದೇವನ ಶರಣರು ಪರುಷದ ಸಮುದ್ರವೇ ಸರಿ. ಗುರು ಬಸವಣ್ಣನವರು ಪಾಪಿ ಪತಿತರನ್ನು ಪರಿವರ್ತಿಸುವ ಯೋಜನೆ ರೂಪಿಸಿ ಜಂಗಮರನ್ನು ವೇಶ್ಯಾಕೇರಿಗಳಿಗೆ ಧರ್ಮಬೋಧನೆಗೆ ಕಳಿಸುತ್ತಿದ್ದರು. ಸಾಮಾನ್ಯ ಮುಗ್ಧ ಭಕ್ತರಿಗೆ ಇದು ಅರ್ಥವಾಗುತ್ತಿರಲಿಲ್ಲ. ಏಕೆಂದರೆ ಅವರ ದೃಷ್ಟಿಯಲ್ಲಿ ವೇಶ್ಯೆಯರು ಮಡಿವಂತ ಸಮಾಜಕ್ಕೆ ಅಸ್ಪೃಶ್ಯರು. ಆಗ ಗುರು ಬಸವಣ್ಣನವರ ಬಳಿ ಬಂದು ದೂರು ಸಲ್ಲಿಸಿ ಜಂಗಮರು ವೇಶ್ಯಾಕೇರಿಯಲ್ಲಿ ಕಂಡರು ಎಂದು ಹೇಳಿರಲಿಕ್ಕೂ ಸಾಕು. ಆಗ ಅವರಿಗೆ ಉತ್ತರವಾಗಿ ಈ ವಚನವನ್ನು ಧರ್ಮಪಿತರು ಹೇಳಿದ್ದಾರೆ. "ಅವರು (ಜಂಗಮರು) ಪರುಷದ ಮೂರ್ತಿಗಳು ಎಂಥವರನ್ನೂ ಪರಿವರ್ತಿಸಬಲ್ಲರು." ಎಂದು ಆತ್ಮವಿಶ್ವಾಸದಿಂದ ನುಡಿದಿದ್ದಾರೆ.

787. ಶರಣರು ಮರ್ತ್ಯರಲ್ಲ.

ಉರಿ ತಾಗಿದ ಮೃಗವು ಒಂದಡಿಯನಿಡುವುದೆ?
ತನುವ ತಾಗಿದ ಸುಖವು ಆಗಲುವುದೆ?
ಲಿಂಗದೇವನ ಶರಣರ ಅನುಭಾವವರಿದವರ
ಮರಳಿ ಮರ್ತ್ಯರೆಂದೆನಬಹುದೆ? –ಬವದೀ. 788

ಬೆಂಕಿಯನ್ನು ಕಂಡ ಮೃಗವು ಒಂದು ಹೆಜ್ಜೆ ಮುಂದಿಡದೆ ಸ್ತಬ್ಧವಾಗಿ ನಿಲ್ಲುವುದು. ಶರೀರವನ್ನು ಆವರಿಸಿಕೊಂಡ ದಿವ್ಯಾನುಭವದ ಸುಖವು ತನ್ಮಯತೆಯನ್ನು ತಂದುಕೊಡುವುದು. ಹಾಗೆಯೇ ಲಿಂಗದೇವನ ಶರಣರೊಡನೆ ಅನುಭಾವವ ಮಾಡಿದವರು ಅಪೂರ್ವ ಆನಂದವನ್ನು ಹೊಂದುವರು. ಅಂಥವರನ್ನು ನಾವು ಸಾಮಾನ್ಯ ಮಾನವರು ಎನ್ನಲಾಗುವುದಿಲ್ಲ.

788. ಪರಮ ಸುಖ ಪ್ರಾಪ್ತಿ.

ನಿಮ್ಮ ಶ್ರೀಪಾದವ ಮುಟ್ಟಿ ಕರ್ಮ ಹರಿಯಿತ್ತು.
ನಿಮ್ಮ ಪ್ರಸಾದದಿಂದ ಭವಗೆಟ್ಟೆ ನೋಡಯ್ಯಾ!
ಮನಪರುಷ, ದೃಷ್ಟಿಪರುಷ, ಭಾವಪರುಷ ಲಿಂಗಗಣಂಗಳು
ಲಿಂಗದೇವಾ, ನಿಮ್ಮ ಶರಣರ ಅನುಭಾವದಿಂದ
ಆನು ಸುಖಿಯಾದೆನು. –ಬವದೀ. 789

ತಮ್ಮ ಜೀವನವು ಧನ್ಯವಾಯಿತು ಎಂಬ ಪರಮ ತೃಪ್ತಿಯಿಂದ ಗುರು ಬಸವಣ್ಣನವರು ಈ ವಚನವನ್ನು ಬರೆದಿದ್ದಾರೆ. ಅವರ ಜೀವನವು 'ಯಾವುದರಿಂದ ಸಾರ್ಥಕವಾಗಿದೆ?

1. ದೇವನ ಶ್ರೀಪಾದವ ಮುಟ್ಟಿ

2. ಪ್ರಸಾದವನ್ನು ಪಡೆದು
3. ಶರಣರ ಅನುಭಾವದಿಂದ

ಯಾವ ಜನ್ಮದ ಪುಣ್ಯವೋ ಎಲ್ಲ ಸಂಗ್ರಹಿತವಾಗಿ ಈ ಜನ್ಮದಲ್ಲಿ ಸೃಷ್ಟಿಕರ್ತನಾದ ಲಿಂಗದೇವನನ್ನು ಅಂಗದ ಮೇಲೆ ಧರಿಸಿಕೊಂಡು ಅಂಗೈಯಲ್ಲಿ ಪೂಜಿಸಿ, ಮನ ಮುಟ್ಟಿ ನಮಿಸುವ ಭಾಗ್ಯ ದೊರೆತಿದೆ. ಬಹುಪಾಲು ಜನರು ಈ ಭಾಗ್ಯದಿಂದ ವಂಚಿತರಾಗಿದ್ಧಾರೆ. ಅದೇ ರೀತಿ ನಿತ್ಯವೂ ಪೂಜಿಸಿ ಕರುಣ ಪ್ರಸಾದವನ್ನು ಸೇವಿಸಿ ಭವವನ್ನು ಗೆಲ್ಲಲು ಸಾಧ್ಯವಾಯಿತು. ಲಿಂಗ ಗಣಂಗಳು ಪರುಷಮಯ ವ್ಯಕ್ತಿತ್ವ ಪಡೆದವರು. ಅವರ ಮನಪರುಷ, ದೃಷ್ಟಿಪರುಷ, ಭಾವಪರುಷ ಇಂತಹ ಶರಣರ ಒಡನಾಟ, ಅನುಭಾವ ಪ್ರಾಪ್ತಿಯಾಗುವುದರಿಂದ ಜೀವನವು ಧನ್ಯವೂ ಪರಿಪೂರ್ಣವೂ ಆಯಿತು.

789. ಮಾದಾರ ಚೆನ್ನಯ್ಯನ ಹಿರಿಮೆ.

ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದಡಲ್ಲಿ ಚೆನ್ನ!
ಪ್ರಮಥರೊಳಗೆ ಚೆನ್ನ, ಪುರಾತರೊಳಗೆ ಚೆನ್ನ!
ಸವಿನೋಡಿ ಅಂಬಲಿ ರುಚಿಯಾಯಿತ್ತೆಂದು,
ಕೂಡಲಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ! –ಬವದೀ. 790

ಕಾಂಚೀಪುರದಲ್ಲಿ ಚೋಳರಾಜನು ಆಳುವಾಗ ಚನ್ನಯ್ಯನೆಂಬ ಶಿವಭಕ್ತನು ಚೋಳ ರಾಜನ ಕುದುರೆ ಲಾಯದಲ್ಲಿ ಹುಲ್ಲನ್ನು ಒದಗಿಸುವ ಕಂಪಣ ಕಾಯಕ ಮಾಡುತ್ತಿದ್ದ. ಜಾತಿಯಿಂದ ಆತ ಮಾದಾರ ಒಂದು ದಿನ ರಾಜಗುರುಗಳಿಗೆ ಅರಮನೆಯ ಆಮಂತ್ರಣವಿದ್ದಿತು. ಚನ್ನಯ್ಯ ಊಟಕ್ಕೆ ಕುಳಿತ. ಹೆಂಡತಿ ಅಂಬಲಿ ನೀಡಿದಳು. ಕೈ ಇಟ್ಟು ಒಂದು ಸುರುಕು ನೋಡಿದ. ಅತಿ ರುಚಿ ಎನ್ನಿಸಿತು. ಗುರುಗಳಿಗೆ ಇರಲೆಂದು ಎತ್ತಿಟ್ಟು ಬಿಟ್ಟ. ಗುರುಗಳಿಗೆ ಆಹ್ವಾನ ಹೋಯಿತು. ಅವರು ಬಂದು ಅಂಬಲಿಯನ್ನು ಸವಿದರು. ನಂತರ ಅರಮನೆಗೆ ಹೋದರು. ಊಟವಾಗಿದೆ ಎಂದಾಗ ರಾಜನಿಗೆ ಅಚ್ಚರಿ. ಅದೂ ಅರಮನೆಯ ಭಕ್ಷ ಭೋಜ್ಯಕ್ಕಿಂತಲೂ ಚನ್ನಯ್ಯನ ಮನೆಯ ಅಂಬಲಿಯೇ ಸವಿಯಾಯಿತೆ? ರಾಜನು ಚನ್ನಯ್ಯನ ಮನೆಗೆ ಹೋಗಿ ಎಂಥಾ ಮಹಿಮ ಎಂದು ಪಾದ ನಮಸ್ಕಾರ ಮಾಡಿದನು. ಅವನನ್ನು ಆನೆಯ ಮೇಲೆ ಕುಳ್ಳಿರಿಸಿ ಅರಮನೆಗೆ ಬರಮಾಡಿಕೊಂಡನು.

ಇಲ್ಲಿ ಚನ್ನಯ್ಯ–ರಾಜಗುರು–ರಾಜ ಮೂವರೂ ಮಹನೀಯರೆ. ಮುಗ್ಧ ಭಕ್ತಿಯಿಂದ ಅಂಬಲಿಯ ಎತ್ತಿಟ್ಟ ಚನ್ನಯ್ಯ, ಜಾತಿಯನ್ನಾಗಲೀ ಅಂತಸ್ತನ್ನಾಗಲೀ ಗಣಿಸದ ಗುರುವು, ತನ್ನಲ್ಲಿ ಕೆಲಸ ಮಾಡುವ ಸಾಮಾನ್ಯ ವ್ಯಕ್ತಿಯನ್ನು ಗೌರವದಿಂದ ಸನ್ಮಾನಿಸಿದ ರಾಜ ಮೂವರೂ ಮಹಾನುಭಾವರೆ !

ನಡೆ ಚನ್ನ, ನುಡಿ ಅಂದರೆ ಮಾತು ಚನ್ನ ಹಿಂದಿನ ಶರಣರಲ್ಲಿ ಚನ್ನ, ಈಗಿನ ಪುರಾತರ ಸಮೂಹದಲ್ಲಿ ಚನ್ನ. ಸವಿ ನೋಡಿ ಅಂಬಲಿಯು ರುಚಿಯಾಯಿತ್ತೆಂದು ಶಿವನಿಗೆ ಬೇಕೆಂದು ಕೈತೆಗೆದು, ಅವನಿಗೇ ಉಣ್ಣಿಸಿದ ಮಹಾನುಭಾವ ಮಾದಾರ ಚನ್ನಯ್ಯ

790. ತ್ರಿವಿಧ ವಿಕಾರವಿಲ್ಲ.

ಲಿಂಗವಿಕಾರಿಗೆ ಅಂಗ ವಿಕಾರವೆಂಬುದಿಲ್ಲ,
ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ,
ಪ್ರಸಾದವಿಕಾರಿಗೆ ಮನೋವಿಕಾರವೆಂಬುದಿಲ್ಲ.
ಇಂತೀ ತ್ರಿವಿಧ ಗುಣವನರಿದಾತನು
ಅಚ್ಚ ಲಿಂಗೈಕ್ಯನು ಕಾಣಾ, ಲಿಂಗದೇವಾ. –ಬವದೀ. 791

ಪರಮಾತ್ಮನಿಗೆ ಒಲಿದವನಿಗೆ ಶರೀರದ ವಿಕಾರಗಳು ಇಲ್ಲವಾಗುತ್ತವೆ. ಹೇಗೆ ಒಂದು ಬಿಂದಿಗೆಯಲ್ಲಿ ನೀರು ಒಳಸೇರುತ್ತಿರುವಂತೆಯೇ ಒಳಗಿನ ಗಾಳಿ ಹೊರಹೋಗುವುದೋ ಹಾಗೆ ಲಿಂಗದೇವನಿಗೆ

ಸಮರ್ಪಣೆಯಾಗುತ್ತಿದ್ದಂತೆಯೇ ದೇಹದ ವಿಕಾರಗಳು ಅಳಿಯುವವು. ಜಂಗಮವನ್ನು ಅಂದರೆ ತ್ಯಾಗಿಗಳು, ಯೋಗಿಗಳನ್ನು ಸಮಾಜವನ್ನು ಉತ್ಕಟವಾಗಿ ಪ್ರೀತಿಸುವವನಿಗೆ ಹಣದ ಮೇಲೆ ವ್ಯಾಮೋಹವಿರದು. ತನ್ನ ಸಂಪತ್ತೆಲ್ಲವೂ ಸಮಾಜದ್ದು ಎಂಬ ಭಾವವಿರುವುದು. ಪ್ರಸಾದ ತತ್ತ್ವ ಅಳವಟ್ಟವನಿಗೆ ಮನ ವಿಕಾರಗಳಾದ ಕಾಮಕ್ರೋಧಾದಿ ಅರಿಷಡ್ವರ್ಗಗಳು ಕಾಡುವುದಿಲ್ಲ.

ಹೀಗೆ ತ್ರಿವಿಧ ಗುಣಗಳನ್ನು ಅರಿತು ಅಳವಡಿಸಿಕೊಂಡಾತನೇ ನಿಜ ಶರಣನು.

791. ಪ್ರಾಣಲಿಂಗಿಯ ಲಕ್ಷಣ.

ಪ್ರಾಣಲಿಂಗ ಪ್ರತಿಗ್ರಾಹಕನಾದಬಳಿಕ,
ಲಿಂಗವಿರಹಿತನಾಗಿ ನಡೆವ ಪರಿ ಇನ್ನೆಂತೊ?
ಲಿಂಗವಿರಹಿತನಾಗಿ ನುಡಿವ ಪರಿ ಇನ್ನೆಂತೊ?
ಪಂಚೇಂದ್ರಿಯ ಸುಖವನು ಲಿಂಗವಿರಹಿತನಾಗಿ ಭುಂಜಿಸಲಾಗದು,
ಲಿಂಗವಿರಹಿತವಾಗಿ ಉಗುಳ ನುಂಗಲಾಗದು,
ಇಂತೆಂದುದು ಲಿಂಗದೇವನ ವಚನ. –ಬವದೀ. 792

ಕೆಲವರು ಯಾವ ಸಾಧನೆಯನ್ನೂ ಮಾಡಿರುವುದಿಲ್ಲ. ತರ್ಕದಲ್ಲಿ ಬಹಳ ಮುಂದೆ. ಅವರು ಧರ್ಮದಲ್ಲಿ ಆಸಕ್ತಿಯಿಲ್ಲದೆ ಇಷ್ಟಲಿಂಗ ಧರಿಸಿರುವುದಿಲ್ಲ. ಕೇಳಿದರೆ "ನಮ್ಮಲ್ಲಿ ಆತ್ಮಲಿಂಗವಿದೆ. ನಾವು ಪ್ರಾಣಲಿಂಗ ಪೂಜಕರು. ಹೊರಗಿನ ಇಷ್ಟಲಿಂಗ ನಮಗೆ ಬೇಡ" ಎಂದು ವಾದಿಸುವರು. ನಿಜವಾಗಿಯೂ ಪ್ರಾಣಲಿಂಗ ಸ್ಥಲಕ್ಕೆ ಏರಿದವರಾಗಿದ್ದರೆ ಇಷ್ಟಲಿಂಗವು ಅವರ ಪ್ರಾಣವಾಗಬೇಕು. ಪ್ರಾಣವೇ ಲಿಂಗವಾಗಬೇಕು, ಲಿಂಗವೇ ಪ್ರಾಣವಾಗಬೇಕು. ಇದೇ ಪ್ರಾಣಲಿಂಗಿ ಸ್ಥಲ. ಪ್ರಾಣಲಿಂಗ ಪೂಜಕನಾಗಿದ್ದರೆ ಇಷ್ಟಲಿಂಗ ವಿರಹಿತವಾಗಿ ನಡೆಯಬಾರದು, ನುಡಿಯಬಾರದು. ಯಾವುದೇ ಪಂಚೇಂದ್ರಿಯ ಸುಖವನ್ನು ಲಿಂಗವಿಲ್ಲದೆ ಭುಂಜಿಸಬಾರದು; ಲಿಂಗವಿರಹಿತವಾಗಿ ಉಗುಳು ಸಹಿತ ನುಂಗಬಾರದು ಎನ್ನುತ್ತದೆ ಗುರು ಬಸವಣ್ಣನವರ ವಾಣಿ. ಲಿಂಗಪ್ರಾಣಿಯಾದವನಿಗೆ ಅಕಸ್ಮಾತ್ ಏನಾದರೂ ಅಚಾತುರ್ಯ ಸಂಭವಿಸಿ ಇಷ್ಟಲಿಂಗ ದೂರವಾದರೆ ಅವನ ಪ್ರಾಣವೇ ಹೋಗುವ ಸಂಭವಿರುತ್ತದೆ.

792. ಮಾತಿನ ಮಹಾಂತರು.

ಹತ್ತುಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು
ಮುಟ್ಟುವ ತೆರನನರಿಯದನ್ನಕ್ಕ?
ಕಟ್ಟಿದಡೇನು ಬಿಟ್ಟಡೇನು
ಮನವು ಲಿಂಗದಲ್ಲಿ ನಿಕ್ಷೇಪವಾಗದನ್ನಕ್ಕ?
ಮಾತಿನಲಿ ಒಲಿಸಿ ಮಹತ್ತಪ್ಪ ಲಿಂಗವ ಕಂಡಹೆನೆಂಬ
ಪಾತಕರ ಮೆಚ್ಚ ನಮ್ಮ ಲಿಂಗದೇವ. –ಬವದೀ. 793

ಹತ್ತು ಸಾವಿರ ಹಾಡುಗಳನ್ನು ಹಾಡಿ, ರಂಜನೀಯವಾಗಿ ಅವುಗಳಿಗೆ ಅರ್ಥಮಾಡಿದರೆ ಪ್ರಯೋಜನವೇನು? ಮನಸ್ಸು, ದೇವನನ್ನು ಮುಟ್ಟುವ ಬಗೆಯನ್ನು ಅರಿಯದೆ ಇದ್ದರೆ. ಇಷ್ಟಲಿಂಗವನ್ನು ಕಟ್ಟಿದರೇನು ಬಿಟ್ಟರೇನು ಮನಸ್ಸು ದೇವರಲ್ಲಿ ನೆಲೆನಿಲ್ಲದನ್ನಕ್ಕ. ಕೆಲವರು ಮಾತಿನ ಮಾಲೆಯಲ್ಲೇ ತಮಗೆ ದಿವ್ಯಾನುಭವವಾಯಿತು ಎಂದು ಕೊಚ್ಚಿಕೊಳ್ಳುವರು. ಇಂಥ ಪಾತಕರನ್ನು ಲಿಂಗದೇವ ಮೆಚ್ಚಿಕೊಳ್ಳ ಎನ್ನುತ್ತಾರೆ ಗುರು ಬಸವಣ್ಣನವರು.

793. ಲಿಂಗಾರ್ಪಿತ

ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನವೆಂಬ
ಜ್ಞಾನತ್ರಯಂಗಳೇನಾದವು?

ಲಿಂಗದೇವಾ, ನಿಮ್ಮನರಿಯದ ಜ್ಞಾನವೆಲ್ಲಾ ಅಜ್ಞಾನ ! –ಬವದೀ. 794

ಲೌಕಿಕ ಜ್ಞಾನಗಳಲ್ಲಿ ಶ್ವಾನಜ್ಞಾನ ಅಂದರೆ ನಾಯಿಯ ತಳಿಗಳನ್ನು ಕುರಿತ ವಿಶೇಷ ಜ್ಞಾನ, ಗಜ ಜ್ಞಾನ ಅಂದರೆ ಆನೆಯನ್ನು ಪಳಗಿಸುವ ಕಲೆ, ಕುಕ್ಕುಟ ಜ್ಞಾನ–ಕೋಳಿಗಳನ್ನು ಹೋರಾಟಕ್ಕೆ ತರಬೇತಿಗೊಳಿಸುವ ಕಲೆ ಇದೆ ಎಂದು ಕೆಲವರು ಹೆಮ್ಮೆ ಪಡುವರು. ಇಂಥ ಲೌಕಿಕ ಜ್ಞಾನದಿಂದ ಲಾಭವೇನು? ಲಿಂಗದೇವನನ್ನು ಅರಿಯದುದೆಲ್ಲ ಅಜ್ಞಾನವೇ ಸರಿ. ಜ್ಞಾನಕ್ಕೆ ದೇವನೇ ಅಳತೆಗೋಲು. ದೇವರನ್ನು ಕುರಿತು ಜ್ಞಾನವಿಲ್ಲದಿದ್ದರೆ ಅದೇ ಅಜ್ಞಾನ !

794. ಪೂಜೆ ಕರ್ಮಬಂಧನ ಹಾರಿ.

ಕಬ್ಬುನ ಪರುಷವೇದಿಯಾದಡೇನು,
ಕಬ್ಬುನ ಹೊನ್ನಾಗದಡಾ ಪರುಷವದೇಕೊ?
ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ?
ಲಿಂಗದೇವರ ಮನಮುಟ್ಟಿ ಪೂಜಿಸಿ
ಕರ್ಮ ಹರಿಯದಡಾ ಪೂಜೆಯದೇಕೋ? –ಬವದೀ. 796

ಕಬ್ಬುನ ಪರುಷದ ಸಂಪರ್ಕವನ್ನು ಹೊಂದಿದರೇನಂತೆ, ಆ ಕಬ್ಬುನ ಬಂಗಾರವಾಗದಿದ್ದೊಡೆ ಆ ಪರುಷದ ಪ್ರಯೋಜನವೇನು? ಮನೆಯೊಳಗಿರುವ ಕತ್ತಲೆ ಹರಿಯದಿದ್ದಡೆ ಅಂಥ ಜ್ಯೋತಿಯಿಂದ ಪ್ರಯೋಜನವೇನು? ಲಿಂಗದೇವರನ್ನು ಮನಮುಟ್ಟಿ ಪೂಜಿಸಿ ಕರ್ಮವನ್ನು ಹರಿದುಕೊಳ್ಳಬೇಕು. ಕರ್ಮದ ಜಾಲವನ್ನು ಹರಿದುಕೊಳ್ಳಲಾಗದಿದ್ದರೆ ಅಂಥ ಪೂಜೆಯಿಂದ ಪ್ರಯೋಜನವೇನು.?

795. ಅಹಂಕಾರ ಸಲ್ಲದು.

ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿಪ್ಪುದೊ?
ಅಹಂಕಾರಕ್ಕೆ ಎಡೆಗೊಡದೆ ಲಿಂಗತನುವಾಗಿರಬೇಕು.
ಅಹಂಕಾರರಹಿತವಾದಲ್ಲಿ ಸನ್ನಿಹಿತ ಕಾಣಾ, ಲಿಂಗದೇವಾ. –ಬವದೀ. 797

ಅಹಂಕಾರ ಬಂದು ಮನವನ್ನು ಆಶ್ರಯಿಸಿದರೆ ಅಲ್ಲಿ ಲಿಂಗದೇವನು ನೆಲೆಸನು. ಅಹಂಕಾರಕ್ಕೆ ಸ್ಥಳವನ್ನು ಕೊಡದೆ ಲಿಂಗತನುವಾಗಬೇಕು. ಅಹಂಕಾರ ವಿರಹಿತನಾದರೆ ಅಲ್ಲಿ ದೇವನು ನೆಲೆಸುವನು.

796. ನಡೆ–ನುಡಿ ಸಾಮರಸ್ಯ

ನುಡಿದಡೆ ಮುತ್ತಿನ ಹಾರದಂತಿರಬೇಕು;
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು;
ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು;
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು;
ನುಡಿಯೊಳಗಾಗಿ ನಡೆಯದಿದ್ದಡೆ,
ಲಿಂಗದೇವನೆಂತೊಲಿವನಯ್ಯಾ? –ಬವದೀ. 798

ಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧ ಮತ್ತು ಜನಪ್ರಿಯ ವಚನಗಳಲ್ಲಿ ಇದು ಒಂದು. ಮಾತನಾಡುವುದು ಒಂದು ದೈವೀ ಕಲೆ. 'ಮಾತು ಬಲ್ಲವನು (ಮಾಣಿಕ್ಯ) ಪ್ರೀತಿ ತಂದ, ಮಾತನರಿಯದವನು ಜಗಳ ತಂದ', 'ಮಾತು ಮನೆ ಕೆಡಿಸಿತು. ತೂತು ಒಲೆ ಕೆಡಿಸಿತು' ಎಂಬೆಲ್ಲ ಗಾದೆಗಳು ಮಾತಿನ ಸಲುವಾಗಿಯೇ ಹುಟ್ಟಿಕೊಂಡಿವೆ. ಮಾತನಾಡಿದರೆ ಶಬ್ದಗಳು ಕಲೆಸಿಕೊಂಡು ಹೋಗುತ್ತವೆ. ಕೇಳುಗರಿಗೆ ಅರ್ಥವೇ ಆಗದು. ಮುತ್ತಿನ ಮಣಿಗಳು ಬಿಡಿಬಿಡಿಯಾಗಿ ಇದ್ದರೂ ಸಹ ಹಾರದಲ್ಲಿ ಒಂದು ಸೂತ್ರದಲ್ಲಿ ಬಂಧಿಸಲ್ಪಟ್ಟಿರುತ್ತವೆ. ಹಾಗೆ ಮಾತನಾಡುವಾಗ ವಿಷಯದಲ್ಲಿ ಸುಸಂಬದ್ಧತೆ (consistency), ಸ್ಪಷ್ಟತೆ (clarity) ಇರಬೇಕು. ವಿಷಯಾಂತರ ಮಾಡುತ್ತ ಒಂದು ವಿಷಯದಿಂದ ಇನ್ನೊಂದಕ್ಕೆ ಕುಪ್ಪಳಿಬಾರದು.

ಆದ್ದರಿಂದ ಮಾತನಾಡುವಾಗ ಹೇಗೆ ಮುತ್ತಿನ ಮಣಿಗಳು ಒಂದು ಸೂತ್ರದಿಂದ ಬಂಧಿಸಲ್ಪಟ್ಟಿರುವವೋ ಹಾಗೆ ವಿಷಯಗಳು ಒಂದು ತತ್ತ್ವದ ಸೂತ್ರದ ಮೇಲೆ ಬಂಧಿಸಲ್ಪಟ್ಟಿರಬೇಕು.

"ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು" ಹಿಂದಿನ ಕಾಲದಲ್ಲಿ ಸಿರಿವಂತರು ಬೆಲೆಬಾಳುವ ಮಾಣಿಕ್ಯಗಳನ್ನು ಇಟ್ಟುಕೊಂಡು ಅವುಗಳ ಬೆಳಕಿನಲ್ಲಿ ವ್ಯವಹರಿಸುತ್ತಿದ್ದರಂತೆ. ಹಾಗೆ ಒಬ್ಬ ವ್ಯಕ್ತಿ ಮಾತನಾಡಿದರೆ ಇತರರ ಮನದ ಕತ್ತಲೆ ನಿವಾರಣೆಯಾಗುವ ಮಾಣಿಕ್ಯದ ದೀಪ್ತಿಯಂತಿರಬೇಕು. ಮಾಣಿಕ್ಯ ಹೇಗೆ ಬೆಲೆಯುಳ್ಳದ್ದೋ ಹಾಗೆ ಮಾತೂ ಸಹ ತೂಕಬದ್ಧವಾಗಿ ಬೆಲೆಯುಳ್ಳದಾಗಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು. ಸ್ಫಟಿಕವು ಪಾರದರ್ಶಕವಾಗಿರುತ್ತದೆ. ಅದರಲ್ಲಿ ಒಳಗೊಂದು ಮುಖ ಹೊರಗೊಂದು ಮುಖ ಇರದು. ಹಾಗೆ ವ್ಯಕ್ತಿಯ ಅಂತರಂಗ ಬಹಿರಂಗವೆರಡೂ ಪಾರದರ್ಶಕವಿರಬೇಕು. ಬಾಯಿಯಲ್ಲಿ ಬೆಣ್ಣೆ , ಕಂಕುಳಲ್ಲಿ ದೊಣ್ಣೆ ಎಂಬ ಕಪಟತನವಿರಬಾರದು. ಬಾಯಿಯಲ್ಲಿ ಶರಣಾರ್ಥಿ, ಎದೆಯಲ್ಲಿ ಕತ್ತರಿ ಎಂಬ ದ್ವಂದ್ವ ನಿಲುವನ್ನು ದೇವರು ಮೆಚ್ಚನು. ಮಾತನಾಡಿದರೆ ಲಿಂಗದೇವನು ಮೆಚ್ಚಿ ಅಹುದು ಅಹುದು ಎನ್ನಬೇಕಂತೆ. ಹೀಗೆ ಹೇಗೆ ಮಾತನಾಡಬೇಕು ಎಂಬುದನ್ನಷ್ಟೆ ಹೇಳಿ ಗುರು ಬಸವಣ್ಣನವರು ಕೈ ಬಿಟ್ಟಿದ್ದರೆ ಅವರು ಕೇವಲ ಸಾಹಿತಿಯಾಗಿ ಬಿಡುತ್ತಿದ್ದರು. ಅವರು ಅನುಭಾವಿ. ಅದಕ್ಕೆ ಮುಂದೆ ಹೇಳುತ್ತಾರೆ "ನುಡಿಯೊಳಗಾಗಿ ನಡೆಯದಿದ್ದರೆ ಲಿಂಗದೇವನು ಎಂತೊಲಿವನು?" ಗುರು ಬಸವಣ್ಣನವರದು ಕ್ರಿಯಾಶೀಲ, ಆಚಾರ ಪ್ರಧಾನ ಧರ್ಮ. ಎಷ್ಟು ಚೆನ್ನಾಗಿ ಮಾತನಾಡಿದರೇನು ಅದನ್ನು ನಡೆಯೊಳಗೆ ತರದೇ ಇದ್ದರೆ ? ನಡೆ ನುಡಿ ಒಂದಾಗಬೇಕು. ನುಡಿದಂತೆ ನಡೆಯಬೇಕು. ನಡೆವುದನ್ನು ಮಾತ್ರ ನುಡಿಯಬೇಕು. ಆಗಲೇ ಲಿಂಗದೇವನೊಲಿಮೆ ಸಾಧ್ಯ

797. ಗುರು-ಶಿಷ್ಯ ಸಂಬಂಧ

ಮನದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ.
ಆದಿವಿಡಿದು ಬಂದಾತನೆ ಭಕ್ತ;
ಅನಾದಿವಿಡಿದು ಬಂದಾತನೆ ಜಂಗಮ!
ಆದಿ ಗುರು, ಅನಾದಿ ಶಿಷ್ಯ!
ಈ ಉಭಯ ಕುಳಸ್ಥಳವ ಬಲ್ಲಡೆ ಆತ
ಲಿಂಗಸಂಬಂಧಿ, ಲಿಂಗದೇವಾ. –ಬವದೀ. 799

ಬೆಡಗಿನ ವಚನದಂತೆ ತೋರುವ ಈ ವಚನ ಪೂರ್ಣ ಅರ್ಥವಾಗುತ್ತಿಲ್ಲ. ಆದರೆ ಒಂದು ಪ್ರಯತ್ನ ಮಾಡಬಹುದು. ಇಲ್ಲಿ ದೇವ-ಭಕ್ತರ ಸಂಬಂಧವನ್ನು ವಿವೇಚಿಸಿದ್ದಾರೆ ಎಂದು ಊಹಿಸಬಹುದು. ಮನದ ಕೊನೆಯ ಮೊನೆಯ ಮೇಲೆ ನೆಲೆಸಿರುವವನು ಲಿಂಗದೇವನಲ್ಲದೆ ಬೇರಲ್ಲ. ಅವನು ದಾಸೋಹದ ಕರ್ತೃವೂ ಅಹುದು, ಫಲಾನುಭವಿಯೂ ಅಹುದು. ಅಂತರ್ ಪ್ರೇರಕನಾಗಿ ಸ್ವತಃ ದಾಸೋಹಿ. ಜೀವಾತ್ಮನೋ ದೀಕ್ಷೆ ಎಂಬ ಆದಿ ಹಿಡಿದು ಬಂದ ಭಕ್ತ, ದೇವನು ಅನಾದಿಯಾದ ಜಂಗಮ. ಗುರುವಿಗೆ ಗುರುತ್ವವನ್ನು ತಂದುಕೊಡುವವನು ಶಿಷ್ಯ. ಹೀಗಾಗಿ ಗುರುವೇ ಆದಿ ಶಿಷ್ಯನೇ ಅನಾದಿ. ಹೀಗೆ ದೇವ-ಭಕ್ತ ಸಂಬಂಧ ಜಂಗಮ-ಭಕ್ತ ಸಂಬಂಧವಾಗಿ, ಗುರು-ಶಿಷ್ಯ ಸಂಬಂಧವಾಗಿ ಸಾಗುತ್ತದೆ.

798. ಸರ್ವ ಜೀವ ದಯಾಪರತ್ವ

ಅರಿದರಿದು ಸಮಗಾಣಿಸಬಾರದು
ತ್ರಾಸಿನ ಕಟ್ಟಳೆಯಂತಿನಿತು ವೆಗ್ಗಳವಾದಡೆ
ಈಶ್ವರನು ಒಡೆಯಿಕ್ಕದೆ ಮಾಣುವನೆ?

ಪಾತ್ರ ಅಪಾತ್ರವೆಂದು ಕಂಡಡೆ ಶಿವನೆಂತು ಮೆಚ್ಚುವನು?
ಜೀವ ಜೀವಾತ್ಮವ ಸರಿಯೆಂದು ಕಂಡಡೆ
ಸಮವೇದಿಸದಿಪ್ಪನೆ ಶಿವನು?
ತನ್ನ ಮನದಲ್ಲಿ 'ಯತ್ರ ಜೀವಸ್ತತ್ರ ಶಿವ'ನೆಂದು
ಸರ್ವಜೀವದಯಾಪಾರಿಯಾದಡೆ, ಲಿಂಗದೇವನು
ಬಂದು ಎತ್ತಿಕೊಳ್ಳದಿಪ್ಪನೆ? –ಬವದೀ. 800

ನ್ಯಾಯದ ತಕ್ಕಡಿಯನ್ನು ವ್ಯಕ್ತಿ ತೂಗುವಾಗ ಉದ್ದೇಶಪೂರ್ವಕವಾಗಿ, ಪಕ್ಷಪಾತದ ದೃಷ್ಟಿಯಿಂದ ಸಮಗಾಣಿಸಬಾರದು. ದೇವರು ನ್ಯಾಯಾಧೀಶ, ಸರ್ವ ದ್ರಷ್ಟಾರ. ವ್ಯಕ್ತಿ ಮಾಡುವ ಮೋಸವನ್ನು ಕಂಡು ಈಶ್ವರನು ತಕ್ಕಡಿಯನ್ನೇ ಒಡೆದುಹಾಕುವನು. ಪಾತ್ರ ಅಪಾತ್ರವೆಂದು ಕೆಲವು ವಿಷಯಗಳಲ್ಲಿ ಭೇದ ಮಾಡಬಾರದು. ಎಲ್ಲ ಜೀವಾತ್ಮರನ್ನೂ ಸಮಭಾವದಿಂದ ಕಾಣಬೇಕು. ಮನಸ್ಸಿನಲ್ಲಿ ವಿಶ್ವಕುಟುಂಬತ್ವವನ್ನು, ಸವಾಜೀವ ದಯಾಪರತ್ವವನ್ನು ಅಳವಡಿಸಿಕೊಂಡ "ಎಲ್ಲಿ ಜೀವವುಂಟೋ ಅಲ್ಲಿ ಶಿವನುಂಟು." ಎಂಬ ತತ್ತ್ವವನ್ನು ಪಾಲಿಸಿದಡೆ ಅಂಥ ದಯಾಶೀಲ ಸದ್ಭಕ್ತನನ್ನು ದೇವರು ಎತ್ತಿಕೊಳ್ಳುವನು.

799. ಆಪ್ಯಾಯನ ಒಂದೆ.

ಸ್ಥಾವರ ಜಂಗಮವೆಂಬ ಉಭಯ ಪಕ್ಷ ಒಂದೇ:
ಆವ ಮುಖದಲ್ಲಿ ಬಂದಡೂ ತೃಪ್ತಿಯೊಂದೇ,
ಲಿಂಗದೇವರ ಆಪ್ಯಾಯನವೊಂದೆ. –ಬವದೀ. 801

ಗುರು ಬಸವಣ್ಣನವರ ವಚನಗಳಲ್ಲಿ ಸ್ಥಾವರ ಜಂಗಮ ಎಂಬ ಪದ ಬಳಕೆ ವೈವಿಧ್ಯಮಯವಾಗಿ ಆಗಿದೆ. ಸ್ಥಾವರ ಎಂದರೆ ದೇವರು. ಜಂಗಮ ಎಂದರೆ ಸಮಾಜ ಎಂದೂ ಅರ್ಥ. ಕೆಲವರಿಗೆ ಇಷ್ಟಲಿಂಗಪೂಜೆ, ಸಾಧನೆ, ತ್ರಾಟಕ, ಅನುಸಂಧಾನ ಇಂಥದರಲ್ಲಿ ಆಸಕ್ತಿ. ಸಮಾಜ ಸೇವೆಯಲ್ಲಿ ಆಸಕ್ತಿ ಕಡಿಮೆ. ಇನ್ನು ಕೆಲವರಿಗೆ ಸಮಾಜ ಸೇವೆಯಲ್ಲಿ ಆಸಕ್ತಿ ಹೆಚ್ಚು. ಪೂಜೆ-ಅನುಸಂಧಾನ ಮಾಡುವರಾದರೂ ಅಷ್ಟೊಂದು ಆಳವಾಗಿ ತೆಗೆದುಕೊಳ್ಳುವವರಲ್ಲ. ಇದು ಅವರವರ ಪ್ರವೃತ್ತಿಗೆ ಅನುಸಾರವಾಗಿರುವುದು. ಅಂತರ್ಮುಖ ಪ್ರವೃತ್ತಿಯವರು ಪೂಜಾಸಕ್ತರಾದರೆ ಬಹಿರ್ಮುಖ ಪ್ರವೃತ್ತಿಯವರು ಸೇವಾಸಕ್ತರು. ಯಾವ ಮುಖದಲ್ಲಿ ಆದರೂ ಪರವಾಗಿಲ್ಲ ತೃಪ್ತಿ ಪಡುವುದು ಮುಖ್ಯ ಒಂದು ನಾಣ್ಯದ ಎರಡು ಮುಖಗಳಂತೆ ಸ್ಥಾವರ-ಜಂಗಮ. ಆದ್ದರಿಂದ ಯಾವ ಮುಖದಲ್ಲಿ ಆಪ್ಯಾಯನ-ಸಂತೃಪ್ತಿ ದೊರೆತರೂ ಒಂದೆ.

800. ಕರುಣೆ ಮುಖ್ಯ

ಮುತ್ತು ಉದಕದಲಾಗದು, ಉದಕ ಮುತ್ತಿನಲಾಗದು,
ತತ್ವ ಘಟಿಸಿದ ಸುಮುಹೂರ್ತದಲಲ್ಲದೆ,
ಚಿತ್ತವೇದ್ಯವಾಗದು ಸದ್ಗುರುವಿನ ಕರುಣಕ್ಕಲ್ಲದೆ.
ಕರ್ತೃ ಕೂಡಲಸಂಗಮದೇವರ ಒಲವಿನ ದಯದ
ಚಿತ್ತವಿಡಿದಂಗಲ್ಲದೆ, ಶಿವತತ್ವ ಸಾಹಿತ್ಯವಾಗದು. –ಬವದೀ. 802

ಸ್ವಾತಿಯ ಹನಿ ಕಪ್ಪೆ ಚಿಪ್ಪಿನಲ್ಲಿ ಬೀಳುತ್ತದೆ. ಅದು ಗಟ್ಟಿಗೊಂಡು ಮುತ್ತಾಗುತ್ತದೆ ಎಂಬ ನಂಬಿಕೆ ಇದೆ. ಸ್ವಾತಿ ಮಳೆಯ ಎಲ್ಲ ಹನಿಗಳೂ ಮುತ್ತಾಗವು. ಯಾವುದೋ ವಿಶಿಷ್ಟ ಸಮಯದಲ್ಲಿ ಕಪ್ಪೆ ಚಿಪ್ಪಿನಲ್ಲಿ ಬಿದ್ದ ಹನಿ ಮಾತ್ರ ಮುತ್ತಾಗುವುದು. ಹಾಗೆ ಸದ್ಗುರುವಿನ ಚಿತ್ತದಲ್ಲಿ ಕರುಣೆ ಮೂಡಬೇಕು. ಅವನ ದೃಷ್ಟಿ ಶಿಷ್ಯನ ಮೇಲೆ ಹರಿಯಬೇಕು. ಸೃಷ್ಟಿಕರ್ತನಾದ ಲಿಂಗದೇವನ ಒಲವಿನ ದಯಾದೃಷ್ಟಿ ಹರಿದಾಗಲೇ ಅಧ್ಯಾತ್ಮಿಕ ಅಭೀಪ್ಸೆ ಅರಳುವುದು.***

--- ಮುಂದುವರಿಯುವುದು.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ



866666

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್

ಉಳವಿ ರಸ್ತೆ, ಧಾರವಾಡ ಸಂಸ್ಥೆಯಿಂದ ಮೂರನೆಯ



ಶರಣೋತ್ಸವ ಕಾರ್ಯಕ್ರಮ

2012, ಏಪ್ರಿಲ್ 28, 29 ಮತ್ತು 30 ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥ ಸಂಸ್ಥೆ ಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟಳು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನು ಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ. 21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್ ವತಿಯಿಂದ ಪ್ರಾರ್ಥನಾ ಮಂದಿರ -ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗಿದೆ. ಪ್ರತಿ ದೇವ (ಭಾನು)ವಾರ ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ-ಪ್ರವಚನದ ನಂತರ ಪ್ರಸಾದ ದಾಸೋಹವಿರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲನವನ್ನು, ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ -ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನು ಅನುಸರಿಸಲೋಸುಗ ಅನಾಥಾಶ್ರಮವನ್ನು ನಡೆಸಲಾಗುತ್ತಿದೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ ಜಂಗಮ ಮೂರ್ತಿ ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30 -6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ ಅಕ್ಕನ ಹುಣ್ಣಿಮೆ ಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ, ಸಮ್ಮೇಳನಗಳನ್ನು ಮಾಡಿರುವುದೇ ಅಲ್ಲದೆ ಸಂಸ್ಥೆಯ ಶಾಖೆಗಳನ್ನು ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಆಶ್ವಯುಜ ಶುದ್ಧ ತ್ರಯೋದಶಿ,

ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆಯಾದರೂ 2010ರಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3 ದಿವಸಗಳ ಕಾಲ ಹಮ್ಮಿಕೊಳ್ಳಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. ಶನಿ(ಶರಣ)ವಾರ ದಿ.28ರಂದು ಬೆಳಿಗ್ಗೆ 10-30ರಿಂದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಕಾರ್ಯಕ್ರಮದ ಉದ್ಘಾಟನೆ, ಸಂಜೆ 4-30ರಿಂದ ಧರ್ಮಚಿಂತನಗೋಷ್ಠಿ. ದಿ. 29 ಭಾನು(ದೇವ)ವಾರದಂದು ಬೆಳಿಗ್ಗೆ 10-30ರಿಂದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ, ಸಾಮೂಹಿಕ ಪ್ರಾರ್ಥನೆ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ. ಸೋಮ(ಶಿವ) ವಾರ ದಿ.30ರಂದು ಬೆಳಿಗ್ಗೆ ವಿಶೇಷ ಪೂಜೆ. 10-30ರಿಂದ ಪೀಠಾರೋಹಣದ 41ನೆಯ ವಾರ್ಷಿಕೋತ್ಸವ, ನಂತರ ಮೆರವಣಿಗೆ, ಸಮಾರೋಪ ಸಮಾರಂಭ.

3 ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	150ರೂ

ದವಸ -ಧಾನ್ಯ, ಬೆಲ್ಲ - ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುವೆವು.

ಶುಭಹಾರೈಕೆಗಳೊಡನೆ

ಶರಣ. ಸಿದ್ಧಣ್ಣ ನಟೇಗಲ್
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಧಾರವಾಡ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ
ಧಾರವಾಡ -580003, ದೂ: 0836-3204121

ಶರಣ. ಎಸ್.ಎಲ್.ಗೌಡರು, ಧಾರವಾಡ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಶರಣ. ಕಲ್ಯಾಣಪ್ಪ ಪರಮಾದಿ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ

ಶರಣ. ಬಸವರಾಜ ಲಿಂಗಶೆಟ್ಟರು
ಅಧ್ಯಕ್ಷರು, ಲಿಂ.ಧ.ಮಹಾಸಭಾ, ಹುಬ್ಬಳ್ಳಿ

ಶರಣ. ಶಿವಕುಮಾರ ಕಟಗಿ
ಸಂಘಟಕರು, ರಾಷ್ಟ್ರೀಯ ಬಸವ ದಳ, ಧಾರವಾಡ

ಶರಣ. ಕರಿಬಸಪ್ಪ ಕೋರಿಶೆಟ್ಟರು
ಅಧ್ಯಕ್ಷರು, ಯುವ ರಾಷ್ಟ್ರೀಯ ಬಸವ ದಳ
ಮೊ : 9008202994/ 9341334828

ಶರಣ. ದೇವೇಂದ್ರಪ್ಪ ಇಂಗಳಳ್ಳಿ
ಕಾರ್ಯದರ್ಶಿ, ರಾ.ಬ.ದಳ, ಧಾರವಾಡ

ಮನುಕುಲದ ಮರೆಯದ ಮಾಣಿಕ್ಯ ಪೂಜ್ಯ ಮಾತಾಜಿ

ದಿ. 13-3-2012ರಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ 67ನೆಯ ವರ್ಧಂತಿ ಉತ್ಸವವನ್ನು ಅವರ ಸನ್ನಿಧಿಯಲ್ಲಿ ಬೆಂಗಳೂರಿನ ರಾಜಾಜಿನಗರದ ಬಸವ ಮಂಟಪದಲ್ಲಿ ರಾಷ್ಟ್ರೀಯ ಬಸವ ದಳ ವತಿಯಿಂದ ಆಚರಿಸಲಾಗುತ್ತಿದೆ ಮಾತ್ರವಲ್ಲ ಐದು ರಾಜ್ಯಗಳಲ್ಲಿಯೂ ಅವರ ವರ್ಧಂತ್ಯುತ್ಸವದ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ತನ್ನಿಮಿತ್ತ ಈ ವಿಶೇಷ ಲೇಖನ.

ಮೊಗದಲ್ಲಿ ದೈವೀ ತೇಜಸ್ಸು, ನೊಸಲ ಮೇಲೆ ನಸುನಗುವ ಭಸ್ಮ, ಕೊರಳಲ್ಲಿ ಇಷ್ಟಲಿಂಗ - ರುದ್ರಾಕ್ಷಿ ಮಾಲೆ. ಮುಡಿಯಲ್ಲಿ ಶೋಭಿಸುವ ಪುಷ್ಪ ಮಾಲೆ, ಶುಭ್ರ ಕಾಷಾಯ ವಸ್ತ್ರಧಾರಿಣಿ, ದರ್ಶನಗೈದರೆ ಭಕ್ತಿ ಭಾವ ಮೂಡಿಸುವ ವ್ಯಕ್ತಿತ್ವ. ಈ ಎಲ್ಲ ಅಂಶಗಳ ಸಮಾಗಮವೇ ಪೂಜ್ಯ ಮಾತಾಜಿ.

ಪೂರ್ವಾಶ್ರಮದ 'ರತ್ನ' ತನ್ನ ಭಕ್ತಿ-ಜ್ಞಾನ-ವೈರಾಗ್ಯಗಳಿಂದ ನಾಡಿನ ಅಧ್ಯಾತ್ಮ ಲೋಕದ ಉತ್ತುಂಗಲಕ್ಕೇರಿ ಮಹಿಳಾಕುಲದ -ಮಾತ್ರವಲ್ಲ ಮನುಕುಲದ ಮರೆಯದ ಮಾಣಿಕ್ಯವಾಗಿ ಕಂಗೊಳಿಸುತ್ತಿದ್ದಾರೆ.

ಐತಿಹಾಸಿಕ ನಗರ ಚಿತ್ರದುರ್ಗಕ್ಕೆ ಅನತಿ ದೂರದಲ್ಲಿರುವ ಸಾಸಲಹಟ್ಟಿ ಗ್ರಾಮದ ಶರಣ ಮನೆತನದ ಕುವರಿಯಾದ ಇವರ ತಾತ ಅಂದಿನ ಹೆಸರಾಂತ ನ್ಯಾಯವಾದಿ ಶರಣ. ಶಂಕರಪ್ಪನವರು. ಜನಸೇವೆಯಲ್ಲಿ ತಮ್ಮ ಬದುಕನ್ನು ಶ್ರೀಗಂಧದಂತೆ ಸವೆಸಿದ ಆದರ್ಶ ವೈದ್ಯರಾದ ಶರಣ ಎಸ್.ಆರ್.ಬಸಪ್ಪನವರು ಹಾಗೂ ಶರಣೆ. ಗಂಗಮ್ಮನವರ ಮುದ್ದಿನ ಮಗಳು ವೈದ್ಯಕೀಯ ರಂಗದಲ್ಲಿ ಸೇವೆ ಸಲ್ಲಿಸುವ ಅದಮ್ಯ ಹಂಬಲ ಹೊಂದಿದ್ದರೂ ಸಂಪ್ರದಾಯಸ್ಥ ಹಿರಿಯರಿಂದ ಅಸಹಕಾರ.

ಆದರೆ ವಿಶ್ವಗುರು ಬಸವಣ್ಣನವರ ವಿಚಾರಧಾರೆಗಳಿಂದ ಪ್ರಭಾವಿತರಾಗಿ ತಮ್ಮ ಸಮಗ್ರ ಬದುಕನ್ನು ಬಸವ ತಂದೆಯ ಸೇವೆಗಾಗಿಯೇ ಮೀಸಲಿಡುವ ದೃಢ ಸಂಕಲ್ಪ ತಳೆದು ಜಂಗಮದೀಕ್ಷೆ ಸ್ವೀಕಾರಕ್ಕೆ ಮುಂದಾದಾಗ ಹಿರಿಯರಿಂದ ಅಸಮಾಧಾನ. ಆದರೂ ಸಮಾಜ ಸೇವೆ ಸೃಷ್ಟಿಕರ್ತನ ಅನುಗ್ರಹಕ್ಕಾಗಿ ಜಂಗಮದೀಕ್ಷೆ ಹೊಂದಿದ ಇವರು ತಮ್ಮ ಜೀವನವನ್ನು ಲಿಂಗಾಯತ ಧರ್ಮ ಪ್ರಸಾರಕ್ಕಾಗಿ ಮುಡಿಪಾಗಿಟ್ಟರು.

1946 ಮಾರ್ಚ 13ರಂದು ಜನಿಸಿದ ಮಾತಾಜಿ ಕೇವಲ 16ನೇ ವಯಸ್ಸಿನಲ್ಲಿಯೇ 500ಕ್ಕೂ ಅಧಿಕ ಗ್ರಂಥಗಳ ಅಧ್ಯಯನಗೈದಿದ್ದರು ಎಂಬುದು ಅವರ ಅತೀವ ಜ್ಞಾನದ ಹಂಬಲಕ್ಕೆ ಸಾಕ್ಷಿ. ಸದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರು ಸಂಪ್ರದಾಯವಾದಿಗಳ ತೀವ್ರ ವಿರೋಧದ ಮಧ್ಯೆಯೂ ಲಿಂಗಾಯತ ಧರ್ಮದ ಸಂವಿಧಾನಕ್ಕೆ ಅನುಗುಣವಾಗಿ ಧಾರವಾಡದಲ್ಲಿ 1970ರಲ್ಲಿ ಪ್ರಥಮ ಮಹಿಳಾ ಜಗದ್ಗುರು ಪೀಠವನ್ನು ಸಂಸ್ಥಾಪನೆ ಮಾಡಿದಾಗ ಅದರ ಪ್ರಥಮ ಪೀಠಾಧ್ಯಕ್ಷರಾಗಿ 'ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ' ಎಂಬ ಅಭಿಧಾನ ತಾಳಿದರು. ಗುರುತ್ವ-ಜಗದ್ಗುರುತ್ವ ಎಂಬುದೆಲ್ಲ ಒಂದು ವರ್ಗದ ಸ್ವತ್ತು ಎಂದು ಭ್ರಮಿಸಿದ್ದ ಅಜ್ಞಾನಿ ಸಮಾಜದ ಮಧ್ಯೆ ಅರ್ಹತಾ ಪರಂಪರೆ ರೂಪಿಸಿ ಲಿಂಗಾಯತ ಧರ್ಮದಲ್ಲಿ ಅರ್ಹತೆ ಇದ್ದ ಯಾರೇ ಆದರೂ ಭಕ್ತ-ಗುರು ಸ್ತ್ರೀ-ಪುರುಷ ಭೇದವಿಲ್ಲದೆ ಅಧ್ಯಾತ್ಮ ಲೋಕದ ಮೇರುಗಿರಿ ತಲುಪಬಹುದೆಂಬುದಕ್ಕೆ ಭಾರತ ಭೂಮಿಯ ಅನರ್ಘ್ಯ 'ಯೋಗಿರತ್ನ'ವಾಗಿರುವ ಪೂಜ್ಯ ಮಾತಾಜಿ ನಿದರ್ಶನವಾಗಿದ್ದಾರೆ.

12ನೇ ಶತಮಾನದ ವೀರ ವೈರಾಗ್ಯನಿಧಿ ಅಕ್ಕಮಹಾದೇವಿಯವರ ಅವತಾರವೇನೋ ಎಂಬಂತೆ ಸಾಧನೆಗೈದಿರುವ ಪೂಜ್ಯ ಮಾತಾಜಿಯವರು ತಮ್ಮ 20ನೇ ವಯಸ್ಸಿನಲ್ಲಿಯೇ ಕಂಚಿನ ಕಂಠದಿಂದ ಅಮೋಘವಾಗಿ ಪ್ರವಚನಗೈದು ಬಸವ ಸಂದೇಶವನ್ನು ಪಸರಿಸಿ ಲಕ್ಷಾಂತರ ಜನರ ಮನದ ಅಂಧಕಾರ ತೊಡೆದು ಅವರಿಗೆ ಜ್ಞಾನ ದೀಪ ಬೆಳಗಿಸಿ ಅವರನ್ನು ಆದರ್ಶ ಆಧ್ಯಾತ್ಮ ಪಥಕ್ಕೆ ತರುವಲ್ಲಿ ಅಹರ್ನಿಶಿ ಶ್ರಮಿಸುತ್ತಿದ್ದಾರೆ.

ತತ್ವಜ್ಞಾನ ಸ್ನಾತಕೋತ್ತರ ಪದವಿಯನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದ ಮಾತಾಜಿ ಈವರೆಗೆ 150ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದು ನಾಡಿನ ಸಾರಸ್ವತ ಲೋಕದ ಧೃವ ನಕ್ಷತ್ರವಾಗಿ ಮಿನುಗುತ್ತಿದ್ದಾರೆ.

ಇವರು ಬರೆದ 'ಹೆಪ್ಪಿಟ್ಟ ಹಾಲು' ಹಾಗೂ 'ತರಂಗಿಣಿ' ಕಾದಂಬರಿಗಳು ರಾಜ್ಯ ಪ್ರಶಸ್ತಿಗೆ ಭಾಜನವಾಗಿವೆ. ಮಾತ್ರವಲ್ಲ ಇವರ ಹೆಚ್ಚಿನ ಗ್ರಂಥಗಳು ಪಂಚಭಾಷೆಗಳಿಗೆ ಅನುವಾದಗೊಂಡಿವೆ. ಲಿಂಗಾಯತ ಧರ್ಮಿಯರಿಗೆ ಧರ್ಮಕ್ಷೇತ್ರ ಅಗತ್ಯವೆಂದು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯಕ್ಷೇತ್ರ ಕೂಡಲಸಂಗಮವನ್ನು ಧರ್ಮಕ್ಷೇತ್ರವೆಂದು ಘೋಷಿಸಿ ಅಲ್ಲಿ ಗುರು ಬಸವ ತಂದೆಯ ಹೆಸರಿನಲ್ಲಿ "ಬಸವ ಧರ್ಮ ಪೀಠ" ಸ್ಥಾಪನೆಗೈದರು.

ಪರಮಪೂಜ್ಯ ಲಿಂಗಾನಂದ ಶ್ರೀಗಳು ಪ್ರಥಮ ಪೀಠಾಧ್ಯಕ್ಷರಾಗಿದ್ದರು. ನಂತರ ಪೂಜ್ಯ ಮಾತಾಜಿಯವರೇ ಸದ್ಯದ ಪೀಠಾಧ್ಯಕ್ಷರು- ಅಲ್ಲಿ 1988ರಿಂದಲೂ 'ಶರಣಮೇಳ' ಎಂಬ ಜಾಗತಿಕ ಉತ್ಸವವನ್ನು ಸಂಘಟಿಸುವ ಮೂಲಕ ಲಿಂಗಾಯತ ಧರ್ಮದ ಮಾತ್ರವಲ್ಲ ಎಲ್ಲ ಬಸವ ಭಕ್ತರನ್ನು ಒಗ್ಗೂಡಿಸುವ ಮಣಿಹ ಪೂರೈಸುತ್ತಿರುವರು. ಈ ಶರಣಮೇಳಕ್ಕೆ ಈ ಬಾರಿ ಬೆಳ್ಳಿ ಹಬ್ಬದ ಸಂಭ್ರಮವಾಗಿತ್ತು.

ಧರ್ಮ ಪ್ರಜ್ಞೆಯೊಂದಿಗೆ ರಾಷ್ಟ್ರ ಸೇವೆಗೆ ಕಂಕಣಬದ್ಧರಾದ ಕಾಯಕಶೀಲ ಶರಣ-ಶರಣೆಯರ ಒಕ್ಕೂಟವಾದ 'ರಾಷ್ಟ್ರೀಯ ಬಸವ ದಳ' ಹಾಗೂ 'ಲಿಂಗಾಯತ ಧರ್ಮ ಮಹಾಸಭಾ' ಸಂಘಟನೆಯ ಶಾಖೆಗಳನ್ನು ರಾಜ್ಯ ಹಾಗೂ ನೆರೆಯ ರಾಜ್ಯಗಳಲ್ಲಿ ರೂಪಿಸಿ ಶರಣ ಸಂಸ್ಕೃತಿಯ -ಭಾರತೀಯ ಸಂಸ್ಕೃತಿಯ ರಕ್ಷಣೆಗೈಯುತ್ತಿದ್ದಾರೆ.

ಆದಿ ಶಂಕರಾಚಾರ್ಯರು ದೇಶದ 4 ಕಡೆ ಪೀಠ ಸ್ಥಾಪನೆಗೈದಂತೆ ಪೂಜ್ಯ ಮಾತಾಜಿಯವರು ಧಾರವಾಡದಲ್ಲಿ 'ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ', ಬಸವ ಕಲ್ಯಾಣದಲ್ಲಿ 'ಅಲ್ಲಮಪ್ರಭು ಶೂನ್ಯಪೀಠ', ಬೆಂಗಳೂರು ಹತ್ತಿರ ಬಸವ ಗಂಗೋತ್ರಿಯಲ್ಲಿ 'ಚನ್ನಬಸವೇಶ್ವರ ಜ್ಞಾನಪೀಠ' ಹಾಗೂ ಮಹಾರಾಷ್ಟ್ರ ಕೊಲ್ಹಾಪುರ ಸಮೀಪದ ಅಲ್ಲಮ ಗಿರಿಯಲ್ಲಿ 'ಅಲ್ಲಮ ಪ್ರಭು ಯೋಗಪೀಠ' ಸಂಸ್ಥಾಪಿಸಿ ಲಿಂಗಾಯತ ಧರ್ಮದ ಉತ್ಥಾನಕ್ಕೆ ನಿರಂತರ ಪ್ರಯತ್ನಿಸುತ್ತಿದ್ದಾರೆ.

ಕೂಡಲಸಂಗಮ ಕ್ಷೇತ್ರದಲ್ಲಿ 'ಶರಣಮೇಳ' ಸಂಘಟಿಸುವ ರೀತಿಯಲ್ಲಿಯೇ ಧಾರವಾಡದಲ್ಲಿ 'ಶರಣೋತ್ಸವ' ಅಲ್ಲಮಗಿರಿಯಲ್ಲಿ 'ಗಣಮೇಳ', ಬಸವ ಗಂಗೋತ್ರಿಯಲ್ಲಿ 'ಬಸವೋತ್ಸವ' ಹಾಗೂ ಆಗಾಗ ವಿವಿಧ ಕಡೆ ಲಿಂಗಾಯತ ಧರ್ಮ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ.

ನವದೆಹಲಿಯ ಬಸವ ಮಂಟಪವಂತೂ ಕನ್ನಡಿಗರ ಅಧ್ಯಾತ್ಮ ಕೇಂದ್ರವಾಗಿದೆ. 'ಭಾರತೀಯ ಧರ್ಮಗಳ ಮಹಾಸಂಘ', ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ಗಳ ಮೂಲಕ ಸರಕಾರದ ಯಾವುದೇ ಸಹಾಯ ಸ್ವೀಕರಿಸದೆ ಅನಾಥಾಲಯ, ವೃದ್ಧಾಶ್ರಮ ಸ್ಥಾಪಿಸಿ ಸಾವಿರಾರು ನೊಂದು ಬೆಂದ ಜೀವಿಗಳಿಗೆ ಪುನರ್ಜನ್ಮ ನೀಡಿದ್ದಾರೆ. ಅನೇಕ ಅನಾಥರು,

ಅಬಲೆಯರಿಗೆ ಪೂಜ್ಯ ಮಾತಾಜಿಯವರು ನಿಜವಾದ ತಾಯಿಯಾಗಿದ್ದು ಅಕ್ಷರಶಃ ಅವರ ಬಾಳಿಗೆ ಹೊಸ ಬೆಳಕು ಮೂಡಿಸಿದ್ದಾರೆ.

ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ ಪಡೆಯಲೇಬೇಕೆಂಬುದೇ ಪೂಜ್ಯ ಮಾತಾಜಿಯವರ ಹಂಬಲ. ಬಸವ ಕಲ್ಯಾಣದಲ್ಲಿ ಗುರು ಬಸವಣ್ಣನವರ 108 ಅಡಿ ಪ್ರತಿಮೆಯನ್ನು ಸರಕಾರದ ಯಾವುದೇ ಅನುದಾನವಿಲ್ಲದೆ ಕೇವಲ ಸದ್ಭಕ್ತರ ಸತ್ಯ ಶುದ್ಧ ಕಾಯಕದ ಕಾಣಿಕೆಯಿಂದಲೇ ನಿರ್ಮಿಸುತ್ತಿರುವ ಇವರ ಪ್ರಯತ್ನದಿಂದ ಬಸವ ಕಲ್ಯಾಣ ಇನ್ನು ಕೆಲವೆ ತಿಂಗಳುಗಳಲ್ಲಿ ಇಡೀ ವಿಶ್ವದ ಅತ್ಯಂತ ಶ್ರೇಷ್ಠ ಪ್ರೇಕ್ಷಣೀಯ ಧಾರ್ಮಿಕ ಸ್ಥಳವಾಗಿ ರೂಪುಗೊಳ್ಳಲಿದೆ. ಸಮಾಜೋದ್ಧಾರಕ್ಕಾಗಿಯೇ ತಮ್ಮ ಬದುಕಿನ ಪ್ರತಿ ಕ್ಷಣಗಳನ್ನು ವಿನಿಯೋಗಿಸುತ್ತಿರುವ ಪೂಜ್ಯ ಮಾತಾಜಿಯವರ 67ನೇ ವರ್ಧಂತಿ ಉತ್ಸವದ ಈ ಶುಭ ಸಂದರ್ಭದಲ್ಲಿ ಅವರಿಗೆ ಗುರುವಂದನೆಗಳನ್ನು ಸಲ್ಲಿಸುತ್ತ ಅವರ ಆರೋಗ್ಯ-ಆಯುಷ್ಯ ವರ್ಧನೆಗಾಗಿ ಸೃಷ್ಟಿಕರ್ತ ಲಿಂಗದೇವ, ಧರ್ಮಗುರು ಬಸವಣ್ಣನವರಲ್ಲಿ ಪ್ರಾರ್ಥಿಸೋಣ.

ಕರಬಸಪ್ಪ ಶಂಕರಪ್ಪ ಕೋರಿಶೆಟ್ಟರ್
ಬೆಳಗಾಲಪೇಟ, ತಾ: ಹಾನಗಲ್
cell. 9945255525, kskorishettar2011@gmail.com

ಹುಟ್ಟು ಹಬ್ಬದ ನುಡಿ ನಮನ

ಅಯ್ಯಾ ನಿಮ್ಮ ಶರಣರ ಜ್ಞಾನವ ಕಂಡು ಭಕ್ತಿ ಪಥವ ಹಿಡಿದೆನು
ಅಯ್ಯಾ ನಿಮ್ಮ ಶರಣರ ಭಕ್ತಿಯ ಕಂಡು ಸತ್ಯ ಸೂತ್ರವ ಹಿಡಿದೆನು
ಅಯ್ಯಾ ನಿಮ್ಮ ಮಗಳು ಮಾತೆ ಮಹಾದೇವಿಯ ಸತ್ಯ ತತ್ತ್ವವ ಕಂಡು
ಅಯ್ಯಾ ನೀವು ಕೊಟ್ಟ ಸಮಾನತೆಯ ಸೂತ್ರದ ಫಲವಾಗಿ
ಅಯ್ಯಾ ನೀವು ಕೊಟ್ಟ ಇಷ್ಟಲಿಂಗವೆಂಬ ಲಿಂಗದೇವನ ಫಲವಾಗಿ
ಅಯ್ಯಾ ನೀವು ಕೊಟ್ಟ ಲಿಂಗಾಯತ ಧರ್ಮದ ಫಲವಾಗಿ
ಅಯ್ಯಾ ನೀವು ಕೊಟ್ಟ ಏಕದೇವೋಪಾಸನೆಯ ಫಲವಾಗಿ
ಅಯ್ಯಾ ಬಸವಯ್ಯಾ ಬದುಕಿದೆನು ನಾನು ನಿಮ್ಮ ತತ್ತ್ವವ
ಮತ್ತೆ ಬಿತ್ತಿದ ಮಾತೆ ಮಹಾದೇವಿಯ ಶ್ರಮದಿಂದ
ಕಾಣಾ ಗುರು ಬಸವೇಶ.

-ದಿಲೀಪ ಭತಮುರ್ಗೆ, ಬೆಂಗಳೂರು.

ಪ್ರಪಂಚದ ಇತಿಹಾಸದಲ್ಲಿಯೇ ಸಕಲ ಜೀವರಾಶಿಗೆ ಲೇಸನ್ನೇ ಬಯಸಿದ್ದರು ಬಸವಾದಿ ಶರಣರು. ಆ ಶರಣರ ತತ್ತ್ವವನ್ನು ಮತ್ತೆ ಬಿತ್ತಿ ಬೆಳೆಸಿ ನೊಂದ ಹೃದಯಗಳಿಗೆ ಬಡ ಬಗ್ಗರಿಗೆ, ದೀನ ದಲಿತರಿಗೆ, ಮಮತೆಯ ಮಡಿಲ ಚಾಚಿ ಅಜ್ಞಾನದ ಅಂಧಕಾರವ ಕಳೆದು, ಮನದ ಮಂದಿರವನ್ನು ಬೆಳಗಿದಂಥ ನಮ್ಮ ನಿಮ್ಮೆಲ್ಲರ ಆರಾಧ್ಯ ದೇವತೆ, ಸ್ತ್ರೀಕುಲ ಕಣ್ಮಣಿ ಕರುಣಾಮಯಿ, ಗುರು ಮಾತೆ, ಸಂಗೀತ ಶಾರದೆ, ಸಾಹಿತ್ಯ ಲೋಕದ ಸರಸ್ವತಿ , ಅಕ್ಕಮಹಾದೇವಿಯ ಅವತಾರಿಣಿ, ಕೋಟಿ ಕೋಟಿ ಶರಣರ ಅಮೂಲ್ಯ ರತ್ನ, ಜ್ಞಾನ ಗಂಗೆ ಪ್ರಪಂಚದ ಮೊಟ್ಟ ಮೊದಲ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಗೆ 67ನೆಯ ವರ್ಧಂತಿಯ ಶುಭಾಶಯಗಳು. ಶ್ರೀ ಮಾತಾಜಿಯವರ ತ್ಯಾಗದ ಮುಂದೆ, ಸಾಧನೆಯ ಮುಂದೆ, ಸತ್ಯದ ನಡೆ ನುಡಿಗಳ ಮುಂದೆ ಇಡೀ ಮನುಕುಲವೆಲ್ಲ ತಲೆಬಾಗಿ ತಮಗೆ ಅನಂತ ಶರಣು ಶರಣಾರ್ಥಿಯನ್ನು ಸಲ್ಲಿಸುತ್ತ ಸೃಷ್ಟಿಕರ್ತ ಲಿಂಗದೇವ ಮತ್ತು ಗುರು ಬಸವಣ್ಣನವರು ಆಯುಷ್ಯ, ಆರೋಗ್ಯ ಭಾಗ್ಯವನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಶರಣು ಶರಣಾರ್ಥಿಗಳೊಂದಿಗೆ
ಕೇಂದ್ರ ರಾಷ್ಟ್ರೀಯ ಬಸವ ದಳ ಮತ್ತು
ಬಸವ ಸಮಾಜ ವೇದಿಕೆ, ಬೆಂಗಳೂರು.

ವಧು ವರಾನ್ವೇಷಣೆ ವಿಭಾಗ

1. ಹೇಮಾ ಈರಯ್ಯಾ, ಜನ್ಮ ದಿನಾಂಕ: 20-08-1985. ಎತ್ತರ 5'.3". ಶಿಕ್ಷಣ: B.A.C.P.Ed. ಶಿಶುವಿಹಾರದಲ್ಲಿ ಕೆಲಸ. ಸ್ಥಳ : ಯಡಹಳ್ಳಿ ತಾ: ಮುಧೋಳ. ಜಿ-ಬಾಗಲಕೋಟೆ. ದೂರವಾಣಿ-9538983819.
ವರ : ಬಿಜನೆಸ್ ಅಥವಾ ನೌಕರಿ.

2. ಮನೋಜಕುಮಾರ್ ಬುಟ್ಟೆ. ಜನ್ಮ ದಿನಾಂಕ.22/2/1982, ಶಿಕ್ಷಣ: MBBS, MS, Gen Surgery, MCH Neuro Surgeon. ದೆಹಲಿಯಲ್ಲಿ ಜಿ.ಬಿ. ಪಂಥ ಹಾಸ್ಪಿಟಲ್‌ನಲ್ಲಿ ಕೆಲಸ. ಸ್ಥಳ : ಔರಾದ್, ಬೀದರ್. ದೂರವಾಣಿ-9448572275.
ವಧು : MBBS ಡಾಕ್ಟರ್ ಆಗಿರಬೇಕು.

3. ಸಾವಿತ್ರಿ ಬಸವರಾಜ ದೊಡ್ಡಮನಿ. ಜನ್ಮ ದಿನಾಂಕ : 7/12/1986. ಶಿಕ್ಷಣ: M.Com, PGDCA, ಸ್ಥಳ : ನಂದಿಹಾಳ, ತಾ: ಬಸವನ ಬಾಗೇವಾಡಿ. ಬಿಜಾಪುರ ಜಿಲ್ಲೆ. ಉದ್ಯೋಗ : Guest Lecturer. Mobile.9611407854.
ವರ : ಬಿಜನೆಸ್ ಅಥವಾ ನೌಕರಿ.

4. ಪ್ರಸಾದ ಕುಲಕರ್ಣಿ. ಜನ್ಮ ದಿನಾಂಕ: 1984. ಶಿಕ್ಷಣ: Diploma in Automobile. ಉದ್ಯೋಗ : Private company. Salary Rs. 8000/-, Mobile. 9986894438.
ವಧು : ಒಳ್ಳೆಯ ಮನೆತನದ ಕನ್ಯೆ ಬೇಕು.

5. ಬಸವಪ್ರಭು ವೀರಭದ್ರಪ್ಪ. ಜನ್ಮ ದಿನಾಂಕ : 4/4/1989. ಎತ್ತರ : 5'.5", ಶಿಕ್ಷಣ: Diploma in Lab Technician. ಉದ್ಯೋಗ : ಗಂಗಾವತಿಯಲ್ಲಿ ಸ್ವಂತ ಲ್ಯಾಬ್ ಇದೆ. Mobile. 9448834924.
ವಧು : ಮೆಡಿಕಲ್ ಲೈನ್‌ನಲ್ಲಿ ಇರುವವರು ಬೇಕು.

6. ವೀಣಾ ರಾಜೇಗೌಡ ಗೌಡಪ್ಪನವರ್, ಜನ್ಮ ದಿನಾಂಕ :16/3/1989. ಶಿಕ್ಷಣ: B.Pharma. ಸ್ಥಳ : ತೇಗುಣಸಿ, ತಾ: ಅಥಣಿ. ಜಿ-ಬೆಳಗಾಂವ. Mobile. 9845703840.
ವರ : ಬಿಜನೆಸ್ ಅಥವಾ ನೌಕರಿ.

7. ಡಾ.ಮಲ್ಲಿಕಾರ್ಜುನ ಎಸ್.ಜಲ್ಲೂರ, ಜನ್ಮ ದಿನಾಂಕ : 31/10/1985. ಶಿಕ್ಷಣ: MBBS, MD. Working in Ambedkar College, Bangalore. Salary : 25 K. ಸ್ಥಳ : ಬಿಜಾಪುರ. Mobile. 9591569422.
ವಧು : MBBS ಆಗಿರಬೇಕು.

8. ಮಲ್ಲಮ್ಮ ಸಿದ್ರಾಮಪ್ಪ ಡಂಗೂರ. ವಯಸ್ಸು 20 ವರ್ಷ. ಶಿಕ್ಷಣ: SSLC, Nursing Course. ಉದ್ಯೋಗ : ಸಂಗೊಳ್ಳಿಯಲ್ಲಿ ಟೇಲರಿಂಗ್ ಮಾಡುತ್ತಿದ್ದಾರೆ. ಸ್ಥಳ : ಕಿತ್ತೂರ. ತಾ-ಬೈಲಹೊಂಗಲ. ಬೆಳಗಾಂವ ಜಿಲ್ಲೆ.
ವರ : ಬಸವ ಸಂಪ್ರದಾಯದವರು, ಬಸವ ದಳದವರು ಆಗಿರಬೇಕು.

9. ರಾಜೇಶ್ವರಿ ನೀಲಕಂಠ ಜವಳಗಿ. ಜನ್ಮ ದಿನಾಂಕ : 31/8/1988, ಶಿಕ್ಷಣ: B.A. ಸ್ಥಳ : ಗುಲಬರ್ಗಾ. ಇವರ ತಂದೆ Retd. BSNL, Asst.Gen Manager. Mobile. 9449799300, Land Line 08472-275222.
ವರ : ಸೂಕ್ತವಾದ ವರ. ಬಿಜನೆಸ್ ಅಥವಾ ನೌಕರಿ.

10. ದೀಪಾ ಬಿ.ವಿ., ತಾಯಿ ಗಿರಿಜಾ. ಶಿಕ್ಷಣ: B.A.B.P.Ed. M.P.Ed, ಸ್ಥಳ : ಶಿವಮೊಗ್ಗಾ. ಉದ್ಯೋಗ : ಟಿ.ಜಿ. ಹಳ್ಳಿಯಲ್ಲಿ ಹೈ ಸ್ಕೂಲ್ ಶಿಕ್ಷಕಿಯಾಗಿದ್ದಾರೆ. Mobile. 9880026105.
ವರ : ಸರಕಾರಿ ಕೆಲಸ / ಸರಕಾರಿ ಟೀಚರ್.

11.

ಹೆಚ್ಚಿನ ವಿವರಗಳಿಗಾಗಿ : ಶರಣ. ಚಂದ್ರಮೌಳಿ, 9448466805

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಶ್ರೀಮತಿ ಕಮಲಮ್ಮ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಪದ್ಮಶ್ರೀ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು
4.	ಪ್ರಕಾಶಕರ ಹೆಸರು	ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ ?	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560010
5.	ಸಂಪಾದಕರ ಹೆಸರು	ಪೂಜ್ಯ ಶ್ರೀಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿ ನಗರ ಬೆಂಗಳೂರು - 560010
6.	ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ	ವಿಶ್ವಕಲ್ಯಾಣ ಮಿಷನ್ (ರಿಜಿಷ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್)
	ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ಬಸವ ಮಂಟಪ ರಾಜಾಜಿ ನಗರ, ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ.03-03-2012

ಪ್ರಕಾಶಕರು
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬೆಂಗಳೂರು -560010





ಬನಹಟ್ಟಿಯಲ್ಲಿ ಮೆರವಣಿಗೆಯಲ್ಲಿ ಪೂಜ್ಯ ಮಾತಾದ್ವಯರನ್ನು ವೇದಿಕೆಗೆ ಕರೆದೊಯ್ಯಲಾಗುತ್ತಿದೆ

ದಿ 4-3-2012 ರಂದು ನಡೆದ ವಿಶ್ವಧರ್ಮ ಪ್ರವಚನ ಸಮಾರೋಪ ಸಮಾರಂಭ



CPMG/KA/BGW/50/2012-2014, RNI 19980/70, POSTED AT MBC BANGALORE GPO ON 3,10,20 OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)